ದೇವಸ್ಥಾನ ಕಟ್ಟಲು ೯೫,೦೦೦ ರೂಪಾಯಿಗಳ ಮಂಜೂರಾತಿ ಕುರಿತು

೯೯೫. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಧಾರ್ಮಿಕ ಮತ್ತು ದತ್ತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತರೀಕೆರೆ ತಾಲ್ಲೂಕಿನ ಗಿರಿಯಾಪುರ ಗ್ರಾಮಸ್ಥರು ದೇವಾಲಯವನ್ನು ಕಟ್ಟಲು ಮನವಿ ಸಲ್ಲಿಸಿದ್ದಾರೆಯೆ ?

ಆ) ಸುಮಾರು ೯೫,೦೦೦ ರೂಪಾಯಿಗಳ ಅಂದಾಜಿನಲ್ಲಿ ಅರ್ಧ ಭಾಗ ಹಣವನ್ನು ಸರ್ಕಾರದವರು ನೀಡುವರೇ ?

ಶ್ರೀ ಕೆ. ಅಮರನಾಥ್ ಶೆಟ್ಟಿ (ಮುಜರಾಯಿ ಮಂತ್ರಿಗಳು).—

ಅ) ಸಲ್ಲಿಸಿದ್ದಾರೆ.

ಆ) ಪರಿಶೀಲಿಸಲಾಗುವುದು.

ಸಭೆಯ ಮುಂದೆ ಮಂಡಿಸಲಾದ ಕಾಗದ ಪತ್ರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಸನ್ಮಾನ್ಯ ಪಾರ್ಥ, ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಖಾತೆಯ ಸಚಿವರ ಪರವಾಗಿ :

೧೯೬೪ನೇ ಇಸವಿಯ ಕರ್ನಾಟಕ ಸಿನಿಮಾ (ನಿಯಂತ್ರಣ) ಶಾಸನದ ೭೦ನೇ ಕಲಮಿನ ಮೇರೆಗೆ :—

ಅ) ಶ್ರೀ ಎಸ್ ಕೆ. ಜಯರಾಮೇಗೌಡ, ಮಾಲೀಕರು, ವಂಜುನಾಥ ಸಂಚಾರಿ ಚಿತ್ರ ಮಂದಿರ ಸಾಲಿಗ್ರಾಮ, ಕೆ ಆರ್ ನಗರ ತಾಲ್ಲೂಕು, ಮೈಸೂರು ಜಿಲ್ಲೆ ಇವರು ಅರ್ಜಿ ಸಲ್ಲಿಸಲು ಆಗಿರುವ ವಿಳಂಬವನ್ನು ಮನ್ನಾ ಮಾಡಿ ವಿನಾಯಿತಿ ನೀಡುವುದರ ಬಗ್ಗೆ ದಿನಾಂಕ ೧೧ನೇ ಫೆಬ್ರವರಿ ೧೯೮೮ರಂದು ಹೊರಡಿಸಲಾದ ಸಂಖ್ಯೆ. ಹೆಚ್.ಡಿ. ೨೧೯ ಸಿ.ಎನ್.ಎ. ೮೭ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಆ) ವಿಜಯರಂಗ ಮಕ್ಕಳ ಚಲನಚಿತ್ರ ಮಂದಿರ, ಜವಾಹರಲಾಲ್ ಬಾಲಭವನ ಕಬ್ಬನ್‌ಪಾರ್ಕ್ ಇಲ್ಲಿ ಚಲನಚಿತ್ರಗಳನ್ನು ಉಚಿತವಾಗಿ ಪ್ರದರ್ಶಿಸುವ ಬಗ್ಗೆ ದಿನಾಂಕ ೩೦ನೇ ಜನವರಿ ೧೯೮೮ರಂದು ಹೊರಡಿಸಲಾದ ಹೆಚ್.ಡಿ. ೨೪೦ ಸಿ.ಎನ್.ಎ. ೮೭ನೇ ಕ್ರಮಾಂಕದ ಆದೇಶವನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು —ಕಾಗದ ಪತ್ರಗಳನ್ನು ಮಂಡಿಸಲಾಯಿತು.

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ಬೆಂಗಳೂರು ನಗರದಲ್ಲಿ ಆಟೋರಿಕ್ಷಾಗಳ ಚಾಲನೆ ನಿಂತಿರುವ ಬಗ್ಗೆ

† ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಸಭಾಧ್ಯಕ್ಷರೇ, ಇವತ್ತು ಪತ್ರಿಕೆಗಳಲ್ಲಿ ಬಂದಿರುವುದನ್ನು ತಾವು ಕೂಡ ನೋಡಿರಬಹುದು ಕಳೆದ ಎರಡು ದಿವಸಗಳಿಂದ ಬೆಂಗಳೂರು ನಗರದಲ್ಲಿ ಆಟೋರಿಕ್ಷಾಗಳ ಓಡಾಟ ಬಂದ್ ಆಗಿದೆ. ಕೆಲವು ಆಟೋರಿಕ್ಷಾಗಳನ್ನವರು ಪೆಟ್ರೋಲ್ ಜೊತೆಯಲ್ಲಿ ಸೀಮೆ ಎಣ್ಣೆಯನ್ನು ಸೇರಿಸಿ ಆಟೋಗಳನ್ನು ಓಡಿಸುತ್ತಿರುವುದರಿಂದ ವಾತಾವರಣ ಕಲುಷಿತವಾಗುತ್ತದೆಂದು ಪೋಲೀಸಿನವರು ಸುಮಾರು ೧೦೦-೨೦೦ ಜನ ಆಟೋ ಡ್ರೈವರುಗಳನ್ನು ಅರೆಸ್ಟ್

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಾಡಿದ್ದಾರೆ. ಕೆಲವು ಆಟೋ ಡ್ರೈವರುಗಳು ಬೇಲ್ ಕೊಟ್ಟರೂ ಅದನ್ನು ರೆಫ್ಯೂಸ್ ಮಾಡಿ, ಅವರನ್ನೆಲ್ಲಾ ಜುಡಿಷಿಯಲ್ ಕಸ್ಟಡಿಗೆ ಹಾಕಿದ್ದಾರೆ. ಇದರಿಂದ ಇವತ್ತು ಎಲ್ಲಾ ಯೂನಿಯನ್‌ನವರು ಸ್ಟ್ರೈಕ್‌ನಲ್ಲಿ ಭಾಗವಹಿಸಿದ್ದಾರೆ ಇದರಿಂದ ಬೆಂಗಳೂರಿನ ನಾಗರೀಕರಿಗೆ ಬಹಳ ತೊಂದರೆಯಾಗಿದೆ. ಕಾಲೇಜುಗಳಿಗೆ ಹೋಗುವವರಿಗೆ, ಆಫೀಸಿಗೆ ಬರುವವರಿಗೆ. ಪರೀಕ್ಷೆಗಳಿಗೆ ಹೋಗುವಂಥ ವಿದ್ಯಾರ್ಥಿಗಳಿಗೆ ಸಾಕಷ್ಟು ತೊಂದರೆಯಾಗಿದೆ. ನಮಗೆಲ್ಲಾ ಗೊತ್ತಿರುವಂತೆ ಬೆಂಗಳೂರು ನಗರದ ಟ್ರಾನ್ಸ್‌ಪೋರ್ಟ್ ವ್ಯವಸ್ಥೆ ಅಷ್ಟು ಸಮರ್ಪಕವಾಗಿಲ್ಲ. ಕೆಲವರು ಪರೀಕ್ಷೆಗೆ ತಡವಾಗಿ ಹೋಗಿದ್ದರಿಂದ ಪರೀಕ್ಷೆಗಳಿಗೆ ಕೂರಿಸಿಲ್ಲ, ಆಫೀಸಿಗೆ ತಡವಾಗಿ ಹೋಗಿದ್ದಕ್ಕೆ ಮೇಲಾಧಿಕಾರಿಗಳು ರಜೆ ಹಾಕಿ ಪೋಗಂಬಂತೆ ತಿಳಿಸಿದ್ದಾರೆ. ಇದಕ್ಕೆ ಇನ್ನೊಂದು ಮುಖ್ಯವಾದ ಕಾರಣ ಏನೆಂದರೆ, ಭಾರತ್ ಬಂದ್ ಆಚರಣೆ ದಿವಸ ಆಟೋರಿಕ್ಷಾಗಳವರು, ತಮ್ಮ ಹೊಟ್ಟೆ ಪಾಡಿಗಾಗಿ ಆಟೋಗಳನ್ನು ಓಡಿಸಿದ್ದಾರೆ. ಅಂದು ಓಡಿಸಿದ ಆಟೋಗಳ ನಂಬರುಗಳನ್ನು ಗುರುತು ಹಾಕಿಕೊಂಡು, ಸರ್ಕಾರದ ವತಿಯಿಂದ ಮತ್ತು ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ವತಿಯಿಂದ ಬಂದಂಥ ಸೂಚನೆ ಮೇರೆಗೆ, ಕಾಂಗ್ರೆಸ್ ಇಂಟಕ್‌ಗೆ ಸೇರಿದ ಆಟೋ ಚಾಲಕರುಗಳನ್ನು ಹಿಡಿದು ಇವತ್ತು ಜುಡಿಷಿಯಲ್ ಕಸ್ಟಡಿಗೆ ಕಳಿಸಿದ್ದಾರೆ. ಕೆಲವು ಡ್ರೈವರ್‌ಗಳನ್ನು ಹೊಡೆದಿದ್ದಾರೆಂದು ಮುಖ್ಯಮಂತ್ರಿಗಳಿಗೆ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೆ ಮೆಮೋರಾಂಡಂ ಕೊಟ್ಟಿದ್ದಾರೆ. ಇದರ ಬಗ್ಗೆ ಪರಿಶೀಲಿಸಿ ಸರಿಯಾದಂಥ ಪರಿಹಾರ ಕೊಡುತ್ತೇವೆಂದು ಹೇಳಿದ್ದರೂ ಇನ್ನು ಪರಿಹಾರ ಕೊಟ್ಟಿಲ್ಲ. ಮೂರು ದಿವಸವಾದರೂ ಕೂಡ ಯಾವುದೇ ರೀತಿಯ ಕ್ರಮ ತೆಗೆದುಕೊಂಡಿಲ್ಲ. ಸ್ಟ್ರೈಕ್ ಇನ್ನೂ ಮುಂದುವರಿಯುತ್ತಿದೆ. ಎಷೆನ್ಸಿಯಲ್ ಕಮಾಡಿಟೀಸ್ ಆಕ್ಟ್ ಕೆಳಗೆ ಸು,೦೦೦ ಆಟೋಗಳನ್ನು ಚೆಕ್ ಮಾಡಿದೆವು, ಈ ಎಷೆನ್ಸಿಯಲ್ ಕಮಾಡಿಟೀಸ್ ಆಕ್ಟ್‌ನ್ನು ವೈಲೇಟ್ ಮಾಡಿ ಆಟೋಗಳನ್ನು ನಡೆಸುತ್ತಿದ್ದರಿಂದ ಸುಮಾರು ೧೯೨ ಕೇಸುಗಳನ್ನು ಗುರುತಿಸಿ ಮಾಡಿ, ಕೇಸ್ ಬುಕ್ ಮಾಡಿದ್ದೇವೆಂದು ಪೋಲೀಸಿನವರು ಹೇಳುತ್ತಿದ್ದಾರೆ. ಕೇಸುಗಳನ್ನು ಹಾಕಿ, ಆಟೋರಿಕ್ಷಾಗಳನ್ನು ಸೀಸ್ ಮಾಡಿರಿ. ಆದರೆ ಡ್ರೈವರುಗಳನ್ನು ಕರೆದುಕೊಂಡು ಹೋಗಿ ಎರಾಸ್‌ಮೆಂಟ್ ಏತಕ್ಕೆ ಮಾಡಬೇಕು. ಒಂದು ದಿವಸ ಆಟೋ ಓಡಿಸದೇ ಹೋದರೆ, ಅವರಿಗೆ ಹೊಟ್ಟೆಗಿಲ್ಲದೆ ತೊಂದರೆ ಆಗುತ್ತದೆ. ಅಲ್ಲದೆ, ಆಟೋಗಳ ಮಾಲೀಕರೇ ಬೇರೆ, ಡ್ರೈವರುಗಳೇ ಬೇರೆ ಇರುತ್ತಾರೆ. ಬಾಡಿಗೆ ಮೇಲೆ ಆಟೋಗಳನ್ನು ತೆಗೆದುಕೊಂಡು ಹೋಗಿ ಜೀವನ ಮಾಡುವಂತವರಿದ್ದಾರೆ. ಸರ್ಕಾರದವರು ತಮ್ಮ ಮಾತು ಕೇಳಲಿಲ್ಲ ಎಂದು ಮನಸ್ಸಿಗೆ ನಷ್ಟಿಟ್ಟುಕೊಂಡು ಕೆಲವು ಏರಿಯಾದಲ್ಲಿ ಇಂಥ ಕೆಲಸ ಮಾಡಿದ್ದಾರೆ. ತಾವು ಕ್ರಮ ಕೈಗೊಳ್ಳಬೇಕಾದರೆ ಸರ್ವೇಸಾಧಾರಣವಾಗಿ ಕೈಗೊಳ್ಳಿ, ಆಟೋರಿಕ್ಷಾಗಳನ್ನು ಸೀಜ್ ಮಾಡಿ ಕಾನೂನು ವೈಲೇಟ್ ಮಾಡಿದ್ದರೆ ಎಲ್ಲಾ ಕಡೆಗಳಲ್ಲೂ ಮಾಡಿ. ಪರ್ಟಿಕ್ಯುಲರ್ ಜನಾಂಗಕ್ಕೆ ಪರ್ಟಿಕ್ಯುಲರ್ ಯೂನಿಯನ್‌ಗೆ ಪರ್ಟಿಕ್ಯುಲರ್ ಡ್ರೈವರ್ಸ್‌ಗೆ ಐಡೆಂಟಿಫೈ ಮಾಡಿ ಅವರಿಗೆ ನಾನ್ ಬೇಲಬಲ್ ಆಫೆನ್ಸ್ ಇದೆ ಎಂದು ಕೂರಿಸಿ ತೊಂದರೆ ಕೊಡತಕ್ಕದ್ದು ಸರಿಯಲ್ಲ. ಇದರಿಂದ ಬೆಂಗಳೂರು ನಾಗರೀಕರಿಗೆ ತೊಂದರೆಯಾಗುತ್ತದೆ. ಇವೊತ್ತು ಒಂದೆರಡು ಆಟೋರಿಕ್ಷಾಗಳು ಸಹ ಓಡುತ್ತಿಲ್ಲ, ಇವರಲ್ಲಿ ಏನಾದರೂ ಒಡಕು ಇದ್ದಿದ್ದರೆ ಬೆಂಗಳೂರು ಬಂದ್ ದಿವಸ ೫೦ ಪರ್‌ಸೆಂಟ್‌ಗೂ ಜಾಸ್ತಿ ಆಟೋಗಳು ಓಡಿದ ಹಾಗೆ ನೆನ್ನೆ ಮೊನ್ನೆ ಓಡುತ್ತಿದ್ದವು, ಆ ತರಹ ಏತಕ್ಕೆ ಆಗಲಿಲ್ಲ ಹೇಳಿ. ಅವರ ಹಕ್ಕಿರ ಒಗ್ಗಟ್ಟು ಇದೆ. ಈಗ ಏನು ಅನ್ಯಾಯವಾಗುತ್ತಿದೆ, ಈ ಅನ್ಯಾಯದ ವಿರುದ್ಧ ಪ್ರತಿಭಟನೆ ಮಾಡಬೇಕೆಂದು ಮೂರು ದಿವಸಗಳಿಂದಲೂ ಅವರು ಸ್ಟ್ರೈಕ್ ಮಾಡುತ್ತಿದ್ದಾರೆ. ನ್ಯಾಯವಾದ ಅವರ ಬೇಡಿಕೆಗಳು ಏನು ಇವೆ. ಅದರ ಬಗ್ಗೆ ಅವರನ್ನು ಕರೆಸಿ ಮಾತನಾಡಿ ಅವರ ಬೇಡಿಕೆಗಳನ್ನು ಈಡೇರಿಸಬೇಕು. ಈಗ ೧೯೨ ಜನರ ಮೇಲೆ ಏನ್ ಕೇಸುಗಳನ್ನು ಹಾಕಿದ್ದೀರಿ. ಆ ಡ್ರೈವರ್‌ಗಳ ಮೇಲೆ ಹಾಕಿರತಕ್ಕ ಕೇಸುಗಳನ್ನು ವಿತ್‌ಡ್ರಾ ಮಾಡಿಕೊಳ್ಳಬೇಕು ಓನರ್ಸ್ ತಪ್ಪು ಮಾಡಿದ್ದರೆ, ಅವರಿಗೆ ಶಿಕ್ಷೆ ಮಾಡುವುದು ಇದ್ದರೆ ಅವಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಅದನ್ನು ಬಿಟ್ಟು ಡ್ರೈವರ್ಸ್‌ಗೆ ಹಿಂಸೆ ಕೊಡತಕ್ಕದ್ದು, ತೊಂದರೆ ಕೊಡತಕ್ಕದ್ದು ಮಾಡಬಾರದು ಎಂದು ಕೇಳಿಕೊಂಡು ಈಗ ಡ್ರೈವರ್ಸ್ ಮೇಲೆ ಹಾಕಿರತಕ್ಕ ಕೇಸುಗಳನ್ನು ವಿತ್‌ಡ್ರಾ ಮಾಡಿಕೊಳ್ಳಬೇಕು, ಹಾಗೂ ಈಗ ಹೆರಾಸ್‌ಮೆಂಟ್ ಆಗುತ್ತಿರುವುದನ್ನು ತಪ್ಪಿಸಬೇಕು. ಈಗ ಯಾರಿಗೆ ಅರೆಸ್ಟ್ ಮಾಡಿದ್ದಾರೆ ಅವರನ್ನು ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವೊತ್ತು ತಾವು ಹಾಕಿರತಕ್ಕ ಕೇಸುಗಳನ್ನು ವಿತ್‌ಡ್ರಾ ಮಾಡಿದರೆ ಎಲ್ಲಾ ಜನತೆಗೆ ಅನುಕೂಲವಾಗುತ್ತದೆ ಈಗ ಪರ್ಟಿಕ್ಯುಲರ್‌ಲಿ ಎಕ್ಸಾಮಿನೇಷನ್ ಸಮಯ ಇದೆ. ಇವೊತ್ತು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಆಫೀಸರ್ಸ್‌ಗೆ ತೊಂದರೆಯಾಗುತ್ತಿದೆ. ಎಂಪ್ಲಾಯೀಸ್‌ಗೆ ತೊಂದರೆಯಾಗುತ್ತಿದೆ. ಅರ್ಜೆಂಟಾಗಿ ಪೇಷಂಟ್‌ಗಳು ಆಸ್ಪತ್ರೆಗೆ ಹೋಗಲಿಕ್ಕೆ ಸಾಧ್ಯವಿಲ್ಲದೇ ಅವರಿಗೆ ತೊಂದರೆಯಾಗಿದೆ. ಎಲ್ಲಾ ಪೇಷಂಟ್

ಗಳು ಬಸ್ಸಿನಲ್ಲಿ ಹೋಗಲಿಕ್ಕೆ ಆಗುವುದಿಲ್ಲ. ಅಥವಾ ಎಲ್ಲರ ಹತ್ತಿರವೂ ಕಾರು ಇರುವುದಿಲ್ಲ. ಮಿಡಲ್ ಕ್ಲಾಸ್ ಮತ್ತು ಪೂರ್‌ಕ್ಲಾಸ್ ಏನಿದ್ದಾರೆ, ಅವರು ಉಪಯೋಗ ಮಾಡುವಂತಾದ್ದೇ ಆಟೋಗಳು ಕೆಲವು ಇಂಟೀರಿಯರ್ ಪ್ಲೇಸ್‌ನಲ್ಲಿ ಬಸ್ ಸೌಕರ್ಯ ಕೂಡ ಇರುವುದಿಲ್ಲ. ಜನರಿಗೆ ಈ ತರಹದ ಒಂದು ಶಿಕ್ಷೆ ಈ ಗೋಳು ಏನಿದೆ, ಇದನ್ನು ತಪ್ಪಿಸಲಿಕ್ಕೆ ಕೂಡಲೇ ಕ್ರಮ ತೆಗೆದುಕೊಂಡು ತಾವು ಹಾಕಿರತಕ್ಕ ಕೇಸುಗಳನ್ನು ವಿತ್‌ಡ್ರಾ ಮಾಡುತ್ತೀರೆಂದು ನಾನು ತಿಳಿದುಕೊಂಡು ಮತ್ತು ಇದರ ಬಗ್ಗೆ ಸವಿಸ್ತಾರವಾಗಿ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ ಈಗ ನನ್ನ ಹತ್ತಿರ ಒಂದು ಮೆಮೊರ್ಯಾಂಡಂ ಕೂಡ ಇದೆ, ಅದು ಐದಾರು ಪುಟ ಇದೆ, ಐದು ನಿಮಿಷಗಳಲ್ಲಿ ಅದನ್ನು ಹೇಳಲಿಕ್ಕೆ ಆಗುವುದಿಲ್ಲ. ಕೆಲವು ಪೋಲೀಸ್ ಅಧಿಕಾರಿಗಳು ಯಾವರೀತಿ ಹೈರಾಸ್‌ಮೆಂಟ್ ಮಾಡಿದ್ದಾರೆ ಅದು ಕೂಡ ನನ್ನ ಹತ್ತಿರ ದಾಖಲೆ ಇದೆ. ಇದರ ಬಗ್ಗೆಯೂ ಸಹ ತಾವು ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದು ಶೇ ಲಕ್ಷ ಜನರಿಗೆ ಸಂಬಂಧಪಟ್ಟ ಸಮಸ್ಯೆ ಇದರ ಬಗ್ಗೆ ತಾವು ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ಈ ನಿಲುವಳಿ ಸೂಚನೆಯನ್ನು ಕೊಡುವುದಕ್ಕೆ ಕಾರಣವನ್ನು ಶ್ರೀಮಾನ್ ಖಾರ್ಗೆಯವರು ಈಗಾಗಲೇ ತಿಳಿಸಿದ್ದಾರೆ ಈ ನಿಲುವಳಿ ಸೂಚನೆಯನ್ನು ಕೊಡಲಿಕ್ಕೆ ಮುಂಖ್ಯವಾಗಿ ಕೊಟ್ಟಿರತಕ್ಕ ಕಾರಣ ಏನೆಂದರೆ, ಈಗ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿರತಕ್ಕ ಆಟೋ ಡ್ರೈವರ್ಸ್ ಏನಿದ್ದಾರೆ. ಅವರನ್ನು ಜ್ಯುಡಿಷಿಯಲ್ ಕಸ್ಟಡಿಗೆ ಕೊಟ್ಟಮೇಲೆ, ಕೇಸ್ ಹಾಕಿದಮೇಲೂ ರಿಮ್ಯಾಂಡ್ ಮಾಡಿದ್ದಾರೆ. ಬೇಲ್ ಕೊಟ್ಟಿಲ್ಲ ಎಂದು ಅವರನ್ನು ಒಳಗಡೆ ಇಟ್ಟಿದ್ದಾರೆ. ಸರ್ಕಾರದ ವರದಿಯ ಪ್ರಕಾರ ೨೦೦–೩೦೦ ಜನ ಜ್ಯುಡಿಷಿಯಲ್ ಕಸ್ಟಡಿಯಲ್ಲಿ ಇದ್ದಾರೆ ಎನ್ನುವ ವಿಚಾರ ಇದೆ ಸಾಮೂಹಿಕವಾಗಿ ಇಷ್ಟೊಂದು ಜನರನ್ನು ತೆಗೆದುಕೊಂಡು ಹೋಗಿ ಸೆಂಟ್ರಲ್ ಜೈಲಿನಲ್ಲಿ ಇಡುವಂತಹದ್ದು ಸಾಧುವಲ್ಲ. ಇಲ್ಲಿ ಮುಂಖ್ಯವಾಗಿ ಆಪಾದನೆ ಇರತಕ್ಕದ್ದು ಅಂಡರ್ ಎಸೆನ್‌ಷಿಯಲ್ ಕಮಾಡಿಟೀಸ್ ಆಕ್ಟ್ ಪ್ರಕಾರ, ಸೀಮೆಎಣ್ಣೆಯನ್ನು ಪೆಟ್ರೋಲ್‌ಗೆ ಮಿಕ್ಸ್ ಮಾಡಿದ್ದಾರೆಂದು ಕಾರಣ ಕೊಟ್ಟಿದ್ದೀರಿ,

ಒಂದು ವೇಳೆ ಅವರು ಕೆರೋಸಿನ್‌ನ್ನು ಮಿಕ್ಸ್ ಮಾಡಿದ್ದರೆ ಅದನ್ನು ನೀವು ಪತ್ತೆಹಚ್ಚಿ ಅವರ ಮೇಲೆ ಕೇಸನ್ನು ಹಾಕಿ, ಅದಕ್ಕೆ ನಾವು ಬೇಡವೆಂದು ಹೇಳುವುದಿಲ್ಲ ಸ್ವಾಮಿ, ತಮಗೂ ಗೊತ್ತಿರಬಹುದು, ಇವತ್ತು ಪೆಟ್ರೋಲ್ ಬಂಕ್‌ಗಳಲ್ಲೇ ಕೆರೋಸಿನ್‌ನ್ನು ಮಿಕ್ಸ್ ಮಾಡಿರುತ್ತಾರೆ. ತಾವು ಪೆಟ್ರೋಲ್ ಬಂಕ್‌ಗಳಲ್ಲಿ ಪೆಟ್ರೋಲ್‌ನ್ನು ಹಾಕಿಸಿ ನೋಡಿ. ಅವರು ಪೆಟ್ರೋಲ್‌ಗೆ ಕೆರೋಸಿನ್‌ನ್ನು ಮಿಕ್ಸ್ ಮಾಡಿರುತ್ತಾರೆಂದು ತಿಳಿದು ಕಾರ್‌ಗಳನ್ನು ಇಟ್ಟುಕೊಂಡಿರುವವರಲ್ಲಿ ಕೆಲವರು ಪೆಟ್ರೋಲ್‌ನ್ನು ಹಾಕಿಸುವುದಿಲ್ಲ. ಆಟೋರಿಕ್ಷಾದವರನ್ನು ಕೇಳಿನೋಡಿ. ಪೆಟ್ರೋಲ್ ಬಂಕ್‌ನವರೇ ಕೆರೋಸಿನ್‌ನ್ನು ಮಿಕ್ಸ್ ಮಾಡುತ್ತಾರೆಂದು ಹೇಳುತ್ತಾರೆ. ಅವರಮೇಲೆ ನೀವು ಕೇಸ್ ಹಾಕಿ. ಅದು ಬಿಟ್ಟು ಈ ಆಟೋರಿಕ್ಷಾದವರಮೇಲೆ ಏತಕ್ಕೆ ಕೇಸನ್ನು ಹಾಕುತ್ತೀರಿ ? ಇವರಿಗೆ ಏತಕ್ಕೆ ನೀವು ತೊಂದರೆಯನ್ನು ಕೊಡುತ್ತೀರಿ ? ನಿಮ್ಮ ಹತ್ತಿರ ಕಾಡುಗೋಲು ಮತ್ತು ಕುಂಬಳಕಾಯಿ ಎರಡೂ ಇದೆ. ಕುಂಬಳಕಾಯಿಯನ್ನು ನೀವು ಸಣ್ಣಗೆ ಬೇಕಾದರೂ ಕೊಚ್ಚಬಹುದು ಅಥವಾ ದೊಡ್ಡದಾಗಿ ಬೇಕಾದರೂ ಕೊಚ್ಚಬಹುದು. ನೀವು ಹೇಗೆ ಬೇಕಾದರೂ ಕೊಚ್ಚಬಹುದು. ಆದ್ದರಿಂದ ಕೆರೋಸಿನ್‌ನ್ನು ಯಾರು ಮಿಕ್ಸ್ ಮಾಡಿದ್ದಾರೆ ಆರ್‌ಮೇಲೆ ಕೇಸನ್ನು ಹಾಕಿ ಆಟೋರಿಕ್ಷಾದವರು ಮಾಡಿದ್ದರೆ ಅವರಮೇಲೆ ಹಾಕಿ, ಪೆಟ್ರೋಲ್ ಬಂಕ್‌ನವರು ಮಾಡಿದ್ದರೆ ಅವರಮೇಲೆ ಹಾಕಿ ಎಸೆನ್‌ಷಿಯಲ್ ಕಮಾಡಿಟೀಸ್ ಆಕ್ಟ್ ಪ್ರಕಾರ ಬೇರೆ ಬೇರೆ ರೀತಿಯ ಕೇಸುಗಳನ್ನು ಹಾಕಬಹುದು. ನೀವು ಪೆಟ್ರೋಲ್ ಬಂಕ್‌ನ್ನು ಏನಾದರೂ ಚೆಕ್ ಮಾಡಿದ್ದೀರಾ ? ಅದನ್ನು ಮಾಡಬೇಕೆಂದು ಆಟೋರಿಕ್ಷಾ ಡ್ರೈವರ್ಸ್ ಅಸೋಸಿಯೇಷನ್‌ನವರು ಹೇಳುತ್ತಿದ್ದಾರೆ ಖಾಸಗೀ ವಾಹನಗಳ ಮಾಲೀಕರು ಹೇಳುತ್ತಿದ್ದಾರೆ. ಪೆಟ್ರೋಲ್ ಬಂಕ್‌ನವರಮೇಲೆ ಕ್ರಮ ತೆಗೆದುಕೊಳ್ಳುವುದನ್ನು ಬಿಟ್ಟು ಈ ಬಡ ಪ್ರಾಣಿಗಳನ್ನು ಹಿಡಿದು ಹಾಕುವುದು ಯಾವ ನ್ಯಾಯ ಸ್ವಾಮಿ ? ಪೆಟ್ರೋಲ್ ಬಂಕ್‌ನವರು ಈ ರೀತಿ ಮಾಡುತ್ತಿದ್ದಾರೆಂದು ಅಸೋಸಿಯೇಷನ್‌ನವರು ಮೊದಲೇ ಹೇಳಿದ್ದಾರೆ. ನಾವು ಮಿಕ್ಸ್ ಮಾಡಿದರೆ ನಮ್ಮ ಮೇಲೆ ಕೇಸ್ ಹಾಕಿ ಎಂದು ಹೇಳಿದ್ದಾರೆ. ಆದರೆ ಸುಲಭವಾಗಿ ಸಿಕ್ಕತಕ್ಕ ಜನ ಇವರು. ಆದ್ದರಿಂದ ಇವರನ್ನು ಹಿಡಿದು ಒಳಗೆ ಹಾಕಿದ್ದೀರಿ. ನೀವು ಈ ಒಂದೇ ಒಂದು ವರ್ಷದ ಜನರಮೇಲೆ ಏತಕ್ಕೆ ಕ್ರಮವನ್ನು ತೆಗೆದುಕೊಂಡಿದ್ದೀರಿ ? ಪೆಟ್ರೋಲ್ ಬಂಕ್‌ನವರ ಮೇಲೆ ಏತಕ್ಕೆ ನೀವು ಕ್ರಮ ತೆಗೆದುಕೊಳ್ಳಲಿಲ್ಲ.

ಆಟೋರಿಕ್ಷಾದವರೇ ಇದನ್ನು ಮಾಡಿದ್ದಾರೆ ಎಂದು ಹೇಳುವುದಾದರೆ ಇದನ್ನು ನೀವು ಪತ್ತೆಮಾಡಿದ್ದೀರ? ಆ ರೀತಿ ನೀವು ಪತ್ತೆ ಮಾಡಿದ್ದರೆ ನಾವು ನಿಮಗೆ ಸಪೋರ್ಟ್ ಮಾಡುತ್ತೇವೆ. ಆದರೆ ಏನೋ ಒಂದು ಕಾರಣ ಕೊಟ್ಟು ಸುಮಾರು ೨೦೦-೩೦೦ ಜನರನ್ನು ತೆಗೆದುಕೊಂಡು ಹೋಗಿ ಜೈಲಿನಲ್ಲಿ ಇಟ್ಟಿದ್ದೀರಿ. ಪ್ರತಿದಿನ ರಿಕ್ಷಾವನ್ನು ಓಡಿಸಿ ಬಂದ ಹಣದಿಂದ ತಮ್ಮ ಸಂಸಾರವನ್ನು ಸಾಕಬೇಕಾಗಿದೆ. ಒಂದು ದಿವಸ ಏನಾದರೂ ಅವರು ರಿಕ್ಷಾವನ್ನು ತೆಗೆದುಕೊಂಡು ಹೋಗಲಿಲ್ಲ ಎಂದರೆ ಅವತ್ತು ಅವರು ಜೀವನ ಮಾಡುವುದು ಕಷ್ಟವಾಗುತ್ತದೆ. ಮಾನ್ಯ ಸದಸ್ಯರಾದ ಖಾರ್ಗೆಯವರು ಹೇಳಿದಂತೆ ಪ್ರತಿದಿನವೂ ಆ ರಿಕ್ಷಾ ಓನರ್‌ಗೆ ಇಂತಿಷ್ಟು ಎಂದು ಹಣವನ್ನು ಕೊಟ್ಟುಬಿಡಬೇಕು.

ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಮಂತ್ರಿಮಂಡಲದ ಸರ್ಕಾರದವರನ್ನು ಕೇಳಿಕೊಳ್ಳುವುದು ಇಷ್ಟೆ, ಈಗ ನೀವು ಏನು ಕೇಸನ್ನು ಈ ಆಟೋರಿಕ್ಷಾದವರಮೇಲೆ ಹಾಕಿದ್ದೀರಿ ಅದನ್ನು ವಾಪಸು ತೆಗೆದುಕೊಳ್ಳಿ ಏಕೆಂದರೇ ನೀವೆ ಕೇಸ್ ಹಾಕಿರುವುದರಿಂದ ಅದನ್ನು ವಾಪಸು ತೆಗೆದುಕೊಳ್ಳುವುದು ಬಹಳ ಸುಲಭ. ನೀವು ಎಷ್ಟು ಕೇಸುಗಳನ್ನು ಹಾಕಿದ್ದೀರಿ ಅಷ್ಟನ್ನೂ ಕೂಡ ವಾಪಸು ತೆಗೆದುಕೊಳ್ಳಿ. ಇದಕ್ಕೆ ನೀವು ಹೇಳಬಹುದು, ಏನೆಂದರೆ, ನಮ್ಮ ಕೆಲಸ ಏನೆಂದರೆ ಕೇಸ್ ಹಾಕಿ ಕೋರ್ಟ್‌ನಲ್ಲಿ ನಿಲ್ಲಿಸುವುದು. ಕೋರ್ಟ್‌ನಲ್ಲಿ ಆ ಕೇಸಿನ ಬಗ್ಗೆ ಏನು ತೀರ್ಮಾನವಾಗುತ್ತದೋ ಅದು ಕೋರ್ಟ್‌ಗೆ ಸೇರಿದ್ದು ಎಂದು, ಸ್ವಾಮಿ, ಇದು ನಿಮ್ಮ ಕೈಯಲ್ಲೇ ಇದೆ. ನಿಮ್ಮ ಮಂತ್ರಿಮಂಡಲದಲ್ಲಿ ಈ ವಿಚಾರವನ್ನು ಇಟ್ಟು ಚರ್ಚೆಮಾಡಿ ಕೇಸುಗಳನ್ನು ವಾಪಸು ತೆಗೆದುಕೊಳ್ಳಲು ತೀರ್ಮಾನ ತೆಗೆದುಕೊಳ್ಳಿ. ಈಗ ಏನಾಗಿದೆ ಎಂದರೆ, ಆಟೋರಿಕ್ಷಾದವರು ಪೂರ್ತಿಯಾಗಿ ಸಂಪು ಹೂಡುವ ಸ್ಥಿತಿಯಲ್ಲಿದ್ದಾರೆ. ಅವರು ಸಂಪು ಮಾಡಿದರೆ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತದೆ. ಇದು ಆಗಬಹುದೆಂದು ನಾವು ಈ ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇವೆ, ಇಲ್ಲದಿದ್ದರೆ ಇದನ್ನು ನಾವು ಕಳುಹಿಸುವ ಕಾರಣ ಇರಲಿಲ್ಲ. ಇವತ್ತು ಆ ರಿಕ್ಷಾ ಡ್ರೈವರ್‌ಗಳು ಜೈಲಿನಲ್ಲಿದ್ದಾರೆ. ಈಗ ಜೈಲಿನಲ್ಲಿರುವವರ ವಿಚಾರ ಮತ್ತು ಸ್ಟೈಕ್‌ನ ವಿಚಾರ ಎರಡೂ ಇದೆ. ಆದ್ದರಿಂದ ತಾವು ಈ ವಿಚಾರವನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಇಲ್ಲದಿದ್ದರೆ ಸರ್ಕಾರ ಹಾಕಿರತಕ್ಕ ಎಲ್ಲ ಕೇಸುಗಳನ್ನೂ ವಿತ್‌ಡ್ರಾ ಮಾಡಲಿ ಇದರ ಬಗ್ಗೆ ಇಲ್ಲಿ ಚರ್ಚೆ ಮಾಡಬೇಕೆಂದು ನಾವು ಇಷ್ಟಪಟ್ಟಿದ್ದೇವೆ. ಚರ್ಚೆಗೆ ನೀವು ಒಪ್ಪಿ ಅವಕಾಶವನ್ನು ಕೊಟ್ಟರೆ ಅಧ್ಯಕ್ಷರಾದ ನಿಮಗೂ ಸುಲಭ ಅಧ್ಯಕ್ಷರಾದ ನಿಮಗೆ ಸುಲಭವನ್ನು ಮಾಡತಕ್ಕ ವಿಚಾರ ನಿಮ್ಮ ಸರ್ಕಾರದ ಕೈಯಲ್ಲಿದೆ ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕೆಂದು ನಾವು ನಿಮ್ಮನ್ನು ಕೇಳಿದ್ದೇವೆ. ಆದರೆ ಇದರ ಬಗ್ಗೆ ಚರ್ಚೆಯನ್ನು ಮಾಡಲೇಬೇಕೆಂಬ ಉದ್ದೇಶ ನಮಗೇನೂ ಇಲ್ಲ. ಆದ್ದರಿಂದ ಚರ್ಚೆಗೆ ಅವಕಾಶವನ್ನು ಮಾಡಿಕೊಡತಕ್ಕದ್ದು ಅಥವಾ ಹಾಕಿರತಕ್ಕ ಕೇಸುಗಳೆಲ್ಲವನ್ನೂ ವಾಪಸು ತೆಗೆದುಕೊಳ್ಳತಕ್ಕದ್ದು, ಈ ಎರಡರಲ್ಲಿ ಏನಾವುದನ್ನು ತಾವು ಒಪ್ಪುತ್ತೀರೆಂಬುದನ್ನು ನಮಗೆ ದಯವಿಟ್ಟು ಹೇಳಬೇಕು.

ಶ್ರೀ ಎಂ ವೀರಪ್ಪಮೊಯಿಲಿ (ಕಾರ್ಕಳ) —ಸನ್ಮಾನ್ಯ ಅಧ್ಯಕ್ಷರೇ ಈಗ ಆಟೋರಿಕ್ಷಾ ಚಾಲಕರು ಪೆಟ್ರೋಲ್ ಜೊತೆಯಲ್ಲಿ ಕೆರೋಸಿನ್ ಮಿಕ್ಸ್ ಮಾಡಿ ಆಟೋಗಳನ್ನು ಓಡಿಸುತ್ತಾರೆಂದು ಹೇಳಿ ಸರ್ಕಾರದವರು ಹಲವಾರು ಜನರನ್ನು ಹಿಡಿದಿರುತ್ತಾರೆ. ಸಾರಸಗಟಾಗಿ ಎಲ್ಲರನ್ನು ಬಿಟ್ಟುಬಿಡಿ ಎನ್ನುವ ಪ್ರಶ್ನೆ ಬರುವುದಿಲ್ಲ. ಯಾರೋ ಮಾಡಿರಬಹುದು. ಇದನ್ನು ಮಾಲಿಕರು ಮಾಡಿದ್ದಾರೆ, ಪೆಟ್ರೋಲ್ ಬಂಕ್‌ನಲ್ಲಿ ಈ ರೀತಿಯಾದ ಅನಾಹುತವಾಗಿದೆ ಎನ್ನುವ ವಾದವನ್ನು ಅವರು ಮುಂದಿಟ್ಟಿದ್ದಾರೆ ಈಗ ಏನಾಗಿದೆ ಎಂದರೆ, ಸಾವಿರಾರು ಆಟೋರಿಕ್ಷೆಗಳನ್ನು ಓಡಿಸುವುದನ್ನು ನಿಲ್ಲಿಸಿಬಿಟ್ಟಿದ್ದಾರೆ ಇದರಿಂದ ಮಂತ್ರಿಯೊಂದು ಅನುಮಾನಕ್ಕೆ ಎಡೆಯಾಗಿದೆ ಸನ್ಮಾನ್ಯ ಸಾರಿಗೆ ಸಚಿವರು ಭಾರತ್ ಬಂದ್‌ದಿವಸ ಸರ್ಕಾರಿ ಬಸ್‌ಗಳೇ ಏನನ್ನು ನಿಲ್ಲಿಸಿಬಿಟ್ಟಿದ್ದರು. ಅತ್ಯಂತದಿವಸ ಅಧಿಕ ನಷ್ಟವನ್ನು ತುಂಬಿಕೊಳ್ಳುವ ಸಲುವಾಗಿ ಆಟೋರಿಕ್ಷಾಗಳನ್ನು ನಿಲ್ಲಿಸಿರಿಸೋಪಸ್ಸನ್ನು ಪೊಲೀಸ್ ಮಾಡುವ ಚಿಂತನೆ ಮಾಡಿರುತ್ತಾರೆಂದು ಹೇಳಬೆಕಾಗುತ್ತದೆ ನಷ್ಟವೇನೋ ಭರ್ತಿಯಾಗಬಹುದೆಂದು ತೆಗೆದುಕೊಂಡರೂ ಏರ್ ಪೊಲ್ಯೂಷನ್ ಆಗುತ್ತದೆಂದರೆ ಬಿ ಟಿ ಎಸ್ ಬಸ್‌ಗಳನ್ನು ಮೊದಲು ಹಿಡಿಯಬೇಕಾಗುತ್ತದೆ. ಅವುಗಳಿಂದ ಬರುವ ಹೊಗೆಯನ್ನು ನೋಡಿದರೆ ಕೆರೋಸಿನ್ ಮಿಕ್ಸ್ ಮಾಡಿರುತ್ತಾರೆಂದು ಹೇಳಬೇಕಾಗುತ್ತದೆ. ಅವುಗಳು ಕಾರ್ಬನ್‌ಡಯಾಕ್ಸೈಡ್ ಹೊಗೆಯನ್ನು ನೋಡಿದರೆ ಮೊದಲು ನಿಮ್ಮ ಬಿ ಟಿ ಎಸ್ ಬಸ್‌ಗಳನ್ನು ಮತ್ತು ರಾಜ್ಯ ಎಕ್ಸ್‌ಪ್ರೆಸ್ ಸಾರಿಗೆ ಬಸ್ಸುಗಳನ್ನು ಚೆಕ್ ಮಾಡಬೇಕೆಂದು ಹೇಳಬೇಕಾಗುತ್ತದೆ ಈ ಸಂದರ್ಭದಲ್ಲಿ ಈ ಸರ್ಕಾರದವರು ಏನು ಮಾಡಿದ್ದಾರೆಂದರೆ,

ಪೋಲೀಸ್‌ನವರ ಜೀಪ್‌ಗಳಿಗೂ ಕೆರೋಸಿನ್ ಮಿಕ್ಸ್ ಮಾಡುವ ಕಾಲ ಬಂದಿದೆ. ಅವರಿಗೆ ಪೆಟ್ರೋಲ್ ಕೊಡುತ್ತಿಲ್ಲ ಪೆಟ್ರೋಲ್ ಇಲ್ಲದೆ ನೀರಿನಲ್ಲಿ ಓಡಿಸುವುದಕ್ಕೆ ಬರುವುದಿಲ್ಲ. ಆದ್ದರಿಂದ ಕೆರೋಸಿನ್ ಹಾಕಿ ಚಾಲು ಮಾಡಬೇಕಾಗುತ್ತದೆ. ಅದಕ್ಕೆ ಎನ್‌ಕರೇಜ್‌ಮೆಂಟ್ ಮಾಡಬೇಕು ಎನ್ನುವ ದೃಷ್ಟಿಯಿಂದ ನಾನು ಇದನ್ನು ನೋಡುತ್ತಿಲ್ಲ ಅದನ್ನು ತಡೆಗಟ್ಟುವುದು ನಮಗೂ ಸ್ಯಾಟಿಸ್‌ಫ್ಯಾಕ್ಷನ್ ಇದೆ, ದಯವಿಟ್ಟು ಈ ಆಟೋರಿಕ್ಷಾಗಳನ್ನು ನಿಲ್ಲಿಸಿರುವುದರಿಂದ ಬಹಳ ಸಮಸ್ಯೆಯಾಗಿದೆ. ಇದರಿಂದ ನಮ್ಮ ಕಾನ್‌ಸ್ಟಿಟ್ಯುಯೆನ್ಸಿಯಿಂದ ಬಂದವರನ್ನು ಕಾರಿನಲ್ಲಿ ಕರೆದುಕೊಂಡು ಹೋಗಬೇಕಾದ ಸಂದರ್ಭ ಬಂದಿದೆ. ಆದ್ದರಿಂದ ಸರ್ಕಾರದವರು ತಕ್ಷಣ ಇದನ್ನು ಪರಿಹರಿಸಬೇಕು. ಇದನ್ನು ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ತೆಗೆದುಕೊಳ್ಳಬಾರದು. ಬಡವರ ಸಮಸ್ಯೆ ಬಂದಾಗ ಗದಾ ಪ್ರಹಾರ ನಡೆಸುವುದು ಸೂಕ್ತವಲ್ಲ. That is a desperate move. The Government should not become so desperate as to arest all the people. They will fully co-operate with you in your drive not to mix kerosene with petrol. ಎಲ್ಲರನ್ನು ಅರೆಸ್ಟ್ ಮಾಡುವ ಮಟ್ಟಕ್ಕೆ ಹೋಗಬಾರದು. ಸಮಸ್ಯೆಯನ್ನು ಪರಿಹಾರ ಮಾಡುವ ದೃಷ್ಟಿಯಿಂದ ನೋಡಬೇಕು. ಆದ್ದರಿಂದ ಈಗ ಅರೆಸ್ಟ್ ಮಾಡಿರುವ ಅವರನ್ನೂ ಬಿಟ್ಟುಕೊಡಬೇಕು. ಮತ್ತೆ ಅವರ ಮೇಲೆ ಹಾಕಿರುವ ಕೇಸ ನ್ನು ವಿತ್‌ಡ್ರಾ ಮಾಡಬೇಕು. ಈಗಾಗಲೇ ಎರಡು ದಿವಸ ಗಳು ಕಳೆದಿರುತ್ತದೆ. ಮೂರನೇ ದಿವಸಕ್ಕೆ ಹೋಗುತ್ತಿದ್ದೆ. ಆದ್ದರಿಂದ ಸರ್ಕಾರದವರು ತಕ್ಷಣ ಪರಿಹಾರವನ್ನು ಸೂಚಿಸಿ ಆಟೋರಿಕ್ಷಾಗಳು ಓಡುವಂತೆ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿ ಗಳನ್ನು ಕೇಳುತ್ತಿದ್ದೇನೆ: ಇದು ಒಂದು ಜರೂರು ಪರಿಸ್ಥಿತಿಯಾದುದರಿಂದ ಅಡ್ಜರ್ನ್‌ಮೆಂಟ್ ಮೋಷನ್ ಆಗಿ ಇದನ್ನು ಮೂವ್ ಮಾಡಿದ್ದೇವೆ. ಆ ಬಡಪಾಯಿಗಳ ಮೇಲೆ ತಾವು ಗದಾ ಪ್ರಹಾರ ಮಾಡಬಾರದು. ಸರ್ಕಾರ ದೃಢವಾಗಿ, ಬಲೀಷ್ಟವಾಗಿದೆ ಎಂದು ಆಟೋರಿಕ್ಷಾದವರ ಮೇಲೆ ತಮ್ಮ ಕಣ್ಣನ್ನು ಏತಕ್ಕೆ ಹಾಯಿಸಬೇಕು. ತಮ್ಮ ದೃಷ್ಟಿಕೋನವನ್ನು ಬದಲಾಯಿಸಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಗೃಹ ಸಚಿವರನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ ತಮಗೆ ಕಾಯಿದೆ, ಕಾನೂನು ಎಲ್ಲ ತಿಳಿದಿರುತ್ತದೆ. ಅಡ್ಜರ್ನ್‌ಮೆಂಟ್ ಮೋಷನ್‌ಗೆ ತಾವು ಸಹಿ ಮಾಡಿಲ್ಲ. ಆದ್ದರಿಂದ ತಾವು ಮಾತನಾಡಲು ಅಧಿಕಾರವಿಲ್ಲ. ಆದರೂ ಪದೇ ಪದೇ ತಾವು ಎದ್ದು ನಿಂತು ಮಾತನಾಡುತ್ತಿದ್ದೀರಿ.

ಶ್ರೀ ಆರ್. ವೆಂಕಟರಾಮಯ್ಯ.—ಒಂದು ಮಾತನ್ನು ಹೇಳುತ್ತೇನೆ ಜಾಸ್ತಿ ಮಾತನಾಡಲು ಹೋಗುವುದಿಲ್ಲ. ಸರ್ಕಾರದವರು ನೂರಾರು ಜನ ಆಟೋರಿಕ್ಷಾ ಚಾಲಕರನ್ನು ಬಂಧಿಸಿದ್ದಾರೆ. ನಾನು ಆಟೋಚಾಲಕರ ನಾಯಕರನ್ನು ಮಾನ್ಯ ಜಾಲಪ್ಪನವರ ಹತ್ತಿರ ಕರೆದುಕೊಂಡು ಹೋಗಿದ್ದೆ. ದಯವಿಟ್ಟು ಅವರ ಮೇಲೆ ಗದಾಪ್ರಹಾರ ಮಾಡುವುದು ಬೇಡವೆಂದು ಹೇಳುತ್ತೇನೆ. ಒಂದು ಲೀಟರ್ ಕೆರೋಸಿನ್ ಬೆರಸಿದವರ ಮೇಲೆ ೧೦ ವರ್ಷ ಜೈಲು ವಾಸ ಅನುಭವಿಸುವಂಥ ಕೇಸನ್ನು ಹಾಕಿದ್ದಾರೆ. ಇದು ಬೇಡ. ಕೆರೋಸಿನ್ ಯೂಸ್ ಮಾಡಬೇಡಿ ಎಂದು ನಾವು ಅವರಿಗೆ ಸೂಚನೆ ಕೊಡುತ್ತೇವೆ. ಆದ್ದರಿಂದ ದಯವಿಟ್ಟು ಆ ಕೇಸನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಪ್ರಾರ್ಥಿಸುತ್ತೇನೆ.

ಶ್ರೀ ಎನ್. ಎಂ. ಅಡ್ಯಂತಾಯ.—ಮಾನ್ಯ ಅಧ್ಯಕ್ಷರೇ, ಬಡಪಾಯಿ ರಿಕ್ಷಾ ಡ್ರೈವರ್‌ಗಳು ಕೆರೋಸಿನ್ ಮಿಕ್ಸ್ ಮಾಡುತ್ತಾರೆಂದು ಸರ್ಕಾರದವರು ಅವರ ಮೇಲೆ ಕೇಸ್ ಹಾಕಿರುವುದು ಸರಿಯಲ್ಲ. ಅದು ಪೆಟ್ರೋಲ್ ಬಂಕ್‌ನಲ್ಲೇ ಮಿಕ್ಸ್ ಆಗಿರಬಹುದು. ಅವರನ್ನು ಹಿಡಿಯುವ ತಾಕತ್ತು ಈ ಸರ್ಕಾರಕ್ಕೆ ಇಲ್ಲ. ಯಾರು ಪಾಪ ಬೆಳಿಗ್ಗೆ ೬ ಗಂಟೆಯಿಂದ ರಾತ್ರಿ ೧೨ ಗಂಟೆವರೆಗೆ ರಿಕ್ಷಾ ಚಾಲನೆ ಮಾಡಿ ಜೀವನ ಮಾಡುತ್ತಿದ್ದಾರೆ, ಅವರ ಮೇಲೆ ಕೇಸ್ ಹಾಕಿ ನೂರಾರು ಜನರನ್ನು ಒಳಗೆ ಹಾಕಿದ್ದೀರಿ. ಆ ಕೇಸನ್ನು ನೀವು ವಿತ್ ಡ್ರಾ ಮಾಡುವುದಕ್ಕೆ ತಯಾರಿಲ್ಲವೆಂದು ಕಾಣುತ್ತದೆ. ಕೆ.ಎಸ್ ಆರ್.ಟಿ ಸಿ.ಯಲ್ಲಿ ದುಡಿಯುವಂಥ ಒಬ್ಬ ಪರಿಶಿಷ್ಟ ಜನಾಂಗದ ಸರ್ಕಾರಿ ಅಧಿಕಾರಿ ಮೇಲೆ ಇದ್ದ ದೊಡ್ಡ ಕೇಸನ್ನೇ, ಅವನಿಗೆ ಒಬ್ಬ ರಾಜಕೀಯ ಪುಢಾರಿಯ ಸ್ನೇಹ ಇರುವುದರಿಂದ ಮಾನ್ಯ ಜಾಲಪ್ಪನವರು ವಿತ್‌ಡ್ರಾ ಮಾಡಿದ್ದಾರೆ. ಮಂಗಳೂರಿನಲ್ಲಿ...

ಅಧ್ಯಕ್ಷರು.—ಈ ರೀತಿ ಆದರೆ ಆಗುವುದಿಲ್ಲ, ದಯವಿಟ್ಟು ನೇರವಾಗಿ ವಿಷಯವನ್ನು ಹೇಳಿ.

ಶ್ರೀ ಎನ್. ಎಂ. ಅಡ್ಕಂತಾಯ.—ಇವತ್ತಿನ ದಿವಸ ನೂರಾರು ಜನ ಆಟೋ ಚಾಲಕರ ಮೇಲೆ ಹಾಕಿರತಕ್ಕ ಕೇಸನ್ನು ವಿತ್‌ಡ್ರಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಇದಕ್ಕೆ ಏನಾದರೂ ಒಂದು ಚೆಕ್ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗಿದೆ. ನಾನು ಕೂಡ ಅವರ ಕಳಕಳಿಯಲ್ಲಿ ಭಾಗಿಯಾಗಿರುತ್ತೇನೆ ಆದರೆ ಮುಂದಿನ ಸಾಲಿನಲ್ಲಿ ಕುಳಿತ ನಾಲ್ಕು ಜನ ಮಾತನಾಡಿದವರು ವಕೀಲರು. ಆದರೆಲ್ಲೂ ಹೆಸರಾಂತ ವಕೀಲರು ಮತ್ತು ರಾಜಕಾರಣಿಗಳು ಹೌದು ನಾವು ಅವರನ್ನು ಜೆಕ್ ಮಾಡಿರುವುದು ಪಲ್ಯೂಷನ್ ಕಂಟ್ರೋಲ್‌ಗಾಗಿ ಅಲ್ಲ. ಎಸೆನ್‌ಷಿಯಲ್ ಕಮಾಡಿಟೀಸ್ ಆ್ಯಕ್ಟ್‌ನ ಕಲಂ ೩ ಮತ್ತು ೭ರ ಮೇಲೆ ಮಾಡಿರುವುದು. ನಾವು ಮಾಡಿದ ಉದ್ದೇಶ ಏನು, ಏತಕ್ಕೆ ಮಾಡಿದೆವು ಎಂದರೆ ರೋಡ್ ಟ್ರಾನ್ಸ್‌ಪೋರ್ಟ್ ಅಥಾರಿಟಿ ಏನಿದೆ ಅದು ಈ ಕೆಲಸ ಮಾಡಬೇಕಾದುದಿಲ್ಲ. ಇದನ್ನು ಮಾಡಬೇಕಾದರೆ ಆಹಾರ ಇಲಾಖೆಯವರು ಮಾಡಬೇಕೆಂದು ಹೈಕೋರ್ಟಿನವರು, ಹೇಳಿದ ಮೇಲೆ ಫುಡ್ ಶೆಲ್‌ನವರು ಚೆಕ್ ಮಾಡಿ ಇದನ್ನು ಮಾಡಿದ್ದಾರೆ. ಇದರ ಬಗ್ಗೆ ಬಹಳಷ್ಟು ಹೇಳಿದರು. ನಮ್ಮ ಸರ್ಕಾರ ಬಂದಮೇಲೆ ಆಟೋರಿಕ್ಷಾ ಡ್ರೈವರ್‌ಗಳಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ನಾವು ಪರ್ಮಿಟ್ ಸಿಸ್ಟಂ ಅನ್ನು ತೆಗೆದು ಹಾಕಿದೆವು. ಆಗ ೨೦ ರಿಂದ ೨೫ ಸಾವಿರ ರೂಪಾಯಿ ಪ್ರೀಮಿಯಂ ಇತ್ತು. ಕೆಲವರು ಪರ್ಮಿಟ್ ತೆಗೆದುಕೊಂಡರು ಪ್ರೀಮಿಯಂ ಸಂಪಾದನೆ ಮಾಡಿಕೊಳ್ಳುತ್ತಿದ್ದರು. ಅದನ್ನು ತಪ್ಪಿಸಬೇಕೆಂದು ಪರ್ಮಿಟ್ ಸಿಸ್ಟಂ ಅನ್ನು ತೆಗೆದವು. ಜೊತೆಗೆ ಬಜಾಜ್‌ನವರ ಹತ್ತಿರ ಮಂಖ್ಯ ಮಂತ್ರಿಗಳು ಮಾತನಾಡಿ ೫೦೦-೬೦೦ ಸ್ಪೆಷಲ್ ಕೋಟಾವನ್ನು ಕೊಡುವಂತೆ ಮಾಡಿ ಕೇಳಿದವರಿಗೆ ನಿರ್ಗಳವಾಗಿ ಆಟೋರಿಕ್ಷಾ ಸಿಕ್ಕುವ ಹಾಗೆ ಮಾಡಿಕೊಟ್ಟಿದ್ದೇವೆ. ಎರಡು ವರ್ಷಗಳಿಂದ ಯಾರು ಡ್ರೈವಿಂಗ್ ಲೈಸೆನ್ಸ್ ಹೊಂದಿದ್ದಾರೆ ಅವರಿಗೆ ಆದ್ಯತೆ ಕೊಟ್ಟಿದ್ದೇವೆ. ಎರಡು ಜನ ಪ್ಯಾಸೆಂಜರ್ ಕೂರಲು ಅವಕಾಶ ಇದ್ದುದನ್ನು ೩ ಜನ ಕೂರುವಂತೆ ಮಾಡಿದ್ದೇವೆ. ಮೈನಾರಿಟೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಲ್ಲಿ ಆಟೋ ಕೊಳ್ಳುವವರಿಗೆ ಸಾಲದ ವ್ಯವಸ್ಥೆ ಮಾಡಿಕೊಟ್ಟಿದ್ದೇವೆ. ಇದು ಆಟೋರಿಕ್ಷಾ ಓಡಿಸುವವರಿಗೆ ನಾವು ಮಾಡಿರುವ ಅಲ್ಪ ಸ್ವಲ್ಪ ಸೇವೆ. ಇದರ ಬಗ್ಗೆ ಮಾನ್ಯ ಸದಸ್ಯರಿಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ನನಗೂ ಇದೆ. ಆ ವಿಷಯದಲ್ಲಿ ನಾವು ಹಿಂದೆ ಬಿದ್ದಿಲ್ಲ. ಅವರಿಗೆ ಇದರಿಂದ ತೊಂದರೆಯಾಗುತ್ತದೆ ಎಂಬುದು ನಮಗೂ ಅರ್ಥವಾಗುತ್ತದೆ.

೧೧-೦೦ ಎ. ಎಂ.

ಬೇಕಾದರೆ ಎಸೆನ್‌ಷಿಯಲ್ ಕಮಾಡಿಟೀಸ್ ಆಕ್ಟ್ ಪ್ರಕಾರ ಯಾವುದೇ ಕ್ರಮ ಕೈಗೊಳ್ಳಬೇಕಾದ್ದಿಲ್ಲ ಎಂದು ಸದನ ತೀರ್ಮಾನ ಮಾಡಲಿ.

ಶ್ರೀ ಆರ್. ವೆಂಕಟರಾಮಯ್ಯ.—ಆಗ ಬ್ಲಾಕ್ ಮಾರ್ಕೆಟರ್ಸ್‌ಗೆ ಅನುಕೂಲವಾಗುತ್ತದೆ.

ಶ್ರೀ ಆರ್. ಎಲ್. ಜಾಲಪ್ಪ.—ತಾವು ಅಡ್ವೋಕೇಟ್. ತಾವು ಎಸೆನ್‌ಷಿಯಲ್ ಕಮಾಡಿಟೀಸ್ ಆಕ್ಟ್ ಓದಿ. ನನ್ನ ಹತ್ತಿರ ಇವರು (ಶ್ರೀ ವೆಂಕಟರಾಮಯ್ಯನವರು) ಆಟೋರಿಕ್ಷಾ ಯೂನಿಯನ್ ನವರನ್ನು ಕರೆದುಕೊಂಡು ಬಂದಿದ್ದರು. ನಾನು ಹೇಳಿದೆ, "ನೋಡಿ ಇದರಿಂದ ಎಷ್ಟು ತೊಂದರೆಯಾಗುತ್ತದೆ, ೨೦ ಸಾವಿರ ಜನ ಆಟೋರಿಕ್ಷಾ ಓಡಿಸುತ್ತಿದ್ದಾರೆ, ಈ ೨೦ ಸಾವಿರ ಜನರಿಗೆ ತೊಂದರೆ ಕೊಡಬೇಕೂ ಎಂಬುದು ಉದ್ದೇಶ ನಮಗಿಲ್ಲ. ಇದರಲ್ಲಿ ಎರಡು ತೊಂದರೆ ಇದೆ. ನೀವೇ ಯೋಚನೆ ಮಾಡಿ. ಪೆಟ್ರೋಲ್‌ಗೆ ಸೀಮೆಎಣ್ಣೆ ಬೆರಸುವುದರಿಂದ ಪಲ್ಯೂಷನ್ ಜಾಸ್ತಿಯಾಗುತ್ತದೆ, ಬೆಂಗಳೂರಿನ ಆನಂದರಾವ್ ಸರ್ಕಲ್‌ನಲ್ಲಿ ರಾಷ್ಟ್ರದಲ್ಲೇ ಹೆಚ್ಚು ಪಲ್ಯೂಷನ್ ಆಗುತ್ತಿದೆ ಎಂದು ವರದಿ ಹೇಳುತ್ತದೆ. ಎರಡನೆಯದಾಗಿ ಎಂಜಿನ್ ಹಾಳಾಗುತ್ತದೆ. ಮೂರನೆಯದಾಗಿ ಬೆಂಗಳೂರು ನಾಗರೀಕರಿಗೆ ಸೀಮೆಎಣ್ಣೆ ಸಿಗುವುದಿಲ್ಲ. ೨೦ ಸಾವಿರ ಆಟೋರಿಕ್ಷಾದವರ ಪೈಕಿ ಅರ್ಧದಷ್ಟು ಜನರು ಒಂದೊಂದು ಲೀಟರ್ ಉಪಯೋಗಿಸಿದರೂ ೧೦ ಸಾವಿರ ಲೀಟರ್ ಬೇಕಾಗುತ್ತದೆ. ೧೦ ಸಾವಿರ ಲೀಟರ್ ಉಪಯೋಗಿಸಿದರೆ ನಾಗರೀಕರಿಗೆ ತೊಂದರೆಯಾಗುತ್ತದೆ." ಎಂದು ಹೇಳಿದೆ. ನಾವು ಎಲ್ಲಿಂದ ಸೀಮೆಎಣ್ಣೆ ಸರಬರಾಜು ಮಾಡಬೇಕು ? ಈಗ ವಿದ್ಯುಚ್ಛಕ್ತಿ ಬಹಳಷ್ಟು ಸರಬರಾಜಾಗುತ್ತಿಲ್ಲ. ಅದಕ್ಕೆ ನಾನಾ ಕಾರಣಗಳಿವೆ. ದೊಡ್ಡವರಾಗಲೀ ಮಧ್ಯವರ್ತಿ ವರ್ಗದವರಾಗಲೀ ಕೂಲಿ ಮಾಡುವವ

ರಾಗಲೀ ಸೀಮೆ ಎಣ್ಣೆ ದೀಪವನ್ನು ನಂಬಿಕೊಂಡಿರುವುದು. ಅವರ ಗತಿ ಏನು ? ಮಾನ್ಯ ಮಲ್ಲಿಕಾರ್ಜುನ ಖಾರ್ಗೆಯವರು ಭಾರತ ಬಂದ್‌ಗೆ ಸಹಕಾರ ಮಾಡಲಿಲ್ಲವೆಂಬ ಕಾರಣದಿಂದ ಈ ರೀತಿ ಮಾಡಿದ್ದಾರೆಂದು ಹೇಳಿದರು. ಅಷ್ಟು ಸಣ್ಣ ಪುಟ್ಟಕ್ಕೆ ನಾವು ಇಳಿಯುವುದಿಲ್ಲ ಸ್ವಾಮಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಆ ದಿನ ಇಡೀ ಕೆ. ಎಸ್. ಆರ್. ಟಿ. ಸಿ. ಕ್ಲೋಸ್ ಮಾಡಿದಿರಿ. ಏಕೆ ಹೇಳುತ್ತೀರಿ ?

ಶ್ರೀ ಆರ್. ಎಲ್. ಜಾಲಪ್ಪ. ಆ ಥರ ನಿಜ ಪ್ರವೃತ್ತಿಯನ್ನು ನಮಗೆ ಹೇಳಬೇಡಿ. ಬೇರೆಯವರಿಗೆ ಹೇಳಿ. ಅಂಥ ಸಣ್ಣ ನೀಚ ಪ್ರವೃತ್ತಿಗೆ ನಾವು ಇಳಿಯುವುದಿಲ್ಲ ಎಂದು ಖಡಾಖಂಡಿತವಾಗಿ ಹೇಳುತ್ತೇನೆ. ನಾನು ವೆಂಕಟರಾಮಯ್ಯನವರು ಬಂದಿದ್ದಾಗ ನಿಮಗೂ ಕೂಡ ಕಾನೂನು ಗೊತ್ತಿದೆ, ಏನು ಮಾಡೋದು ಹೇಳಿ ಎಂದು ಕೇಳಿದೆ. ಮಾನ್ಯ ಖಾರ್ಗೆಯವರು ಒಂದು ಮಾತು ಹೇಳಿದರು. ಏನೆಂದರೆ, ಬೇಲ್ ಕೊಡುತ್ತೇನೆ ಎಂದು. ಹೇಳಿದರೂ ಒಳಗೆ ಹಾಕಿದ್ದಾರೆ ಎಂದು ಹೇಳಿದರು. ಇದು ಕೋರ್ಟಿಗೆ ಅಪಮಾನ. ಈ ರೀತಿಹೇಳುವುದು ಸರಿಯಲ್ಲ. ೧೧೦ ಮಂದಿಯಲ್ಲಿ ೭೬ ಜನ ಬೇಲ್ ಕೊಟ್ಟು ಬಿಡಿಸಿಕೊಂಡಿದ್ದಾರೆ, ಬೇಲ್ ಕೊಟ್ಟರೆ ಬಿಡುತ್ತಾರೆ. ನಾನು ವೆಂಕಟರಾಮಯ್ಯನವರಿಗೆ ಬೇಲ್ ಕೊಡಿ ಎಂದು ತೆಲುಗಿನಲ್ಲಿ ಹೇಳಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಜನರನ್ನು ಈ ಸ್ಟೇಷನ್ನಿನಿಂದ ಆ ಸ್ಟೇಷನ್ನಿಗೆ ಅಂತ ಕರೆದುಕೊಂಡು ಹೋಗಿದ್ದಾರೆ. ಅಲ್ಲಿ ತೊಂದರೆ ಕೊಟ್ಟಿದ್ದಾರೆ,

ಶ್ರೀ ಆರ್. ಎಲ್. ಜಾಲಪ್ಪ.—ಅದೆಲ್ಲಾ ಸುಳ್ಳು ಸ್ವಾಮಿ. ಒಬ್ಬರಿಗೂ ಒಂದು ಏಟು ಹಾಕಿಲ್ಲ. ಅಸೋಸಿಯೇಷನ್ನಿನವರ ಅಲಿಗೇಷನ್ ಇಲ್ಲಿದೆ. ಪೋಲೀಸರು ಹೊಡೆದರು ಅಥವಾ ಹೆರಾಸ್ ಮಾಡಿದರು ಎಂದು ಅವರು ಹೇಳಿಲ್ಲ. ಅವರೇಬರೆದು ಕೊಟ್ಟಿದ್ದಾರೆ.

ಶ್ರೀ ಎನ್. ಎಂ. ಅಡ್ಯಂತಾಯ.—ಅಧ್ಯಕ್ಷರೆ....

ಅಧ್ಯಕ್ಷರು.—ನಾನು ಅವಕಾಶ ಕೊಡೋದಿಲ್ಲ, ಕೂಡ್ರಿ.

ಶ್ರೀ ಆರ್. ಎಲ್. ಜಾಲಪ್ಪ.—ಸ್ವಾಮಿ, ನಾನು ಅಡ್ಯಂತಾಯ ಅವರಷ್ಟು ಬಿಂಡಿಪಂತ ಅಲ್ಲ. ನನಗೆ ಮರೆತುಹೋಗುತ್ತದೆ. ಆದ್ದರಿಂದ ದಯವಿಟ್ಟು ಮಧ್ಯೆ ಇಂಟರ್‌ಫಿಯರ್ ಆಗಬೇಡಿ.

ಶ್ರೀ ಎನ್. ಎಂ. ಅಡ್ಯಂತಾಯ.—ಗೃಡ್ಡಪಮಂತ್ರಿಗಳು ಬಹುಶಃ ಡಾಕ್ಟರ್ ಆಗಿದ್ದರೆ ತಲೆನೋವು ಬಂದರೆ ತಲೆಯನ್ನೆ ಕಡಿಯುತ್ತಿದ್ದರು. ಏಕೆಂದರೆ ಅವರ ಥಿಯರಿ ಪ್ರಕಾರ ಪ್ರಿಸ್ಕ್ರಿಪ್ಷನ್ ಯಾವರೀತಿ ಇದೆ ಎಂದರೆ, ಸೀಮೆಎಣ್ಣೆ ಸಿಗದಿದ್ದರೆ ಆಟೋರಿಕ್ಷಾ ಡ್ರೈವರ್ಸ್ ಮೇಲೆ ಗದಾ ಪ್ರಹಾರ ಮಾಡುತ್ತಾರೆ. ಈ ರೀತಿಯ ಮೆಡಿಸಿನ್ ಪ್ರಿಸ್ಕ್ರೈಬ್ ಮಾಡುತ್ತಾ ಇದ್ದಾರೆ.

ಅಧ್ಯಕ್ಷರು.—ಅವರ ಪ್ರಿಸ್ಕ್ರಿಪ್ಷನ್ ಸರಿ ಇದ್ದರೆ ತೆಗೆದುಕೊಳ್ಳಿ, ಇಲ್ಲದಿದ್ದರೆ ಬಿಡಿ.

ಶ್ರೀ ಆರ್. ಎಲ್. ಜಾಲಪ್ಪ.—ಕೇಂದ್ರದಲ್ಲಿ ಅಡ್ಯಂತಾಯ ಅವರ ಸರ್ಕಾರ ಇದೆ. ದಯವಿಟ್ಟು ಅವರು ಎಸೆನ್‌ಷಿಯಲ್ ಕಮಾಡಿಟೀಸ್ ಆಕ್ಟನ್ನು ವಜಾ ಮಾಡಿಸಲಿ. ನಾವು ಕೃಪಾ ತೆಗೆದು ಕೊಳ್ಳುವುದಿಲ್ಲ. ಆಕ್ಟನ್ನು ನಮ್ಮ ಕೈಗೆ ಕೊಟ್ಟು ಅದನ್ನು ನಾವು ಉಪಯೋಗಿಸಲಿಲ್ಲ ಎಂದರೆ ನಿಮಗೆ ಯೋಗ್ಯತೆ ಇಲ್ಲ ಎಂದು ಹೇಳವುದು, ಉಪಯೋಗಿಸುವುದಕ್ಕೆ ಹೋದರೆ ಏತಕ್ಕೆ ಉಪಯೋಗಿಸುತ್ತೀರಿ ಎಂದು ಹೇಳಂವುದು. ತಮಗೆ ಶಕ್ತಿ ಇದ್ದರೆ ಆಕ್ಟನ್ನು ವಜಾಮಾಡಿಸಿ. ''ಗಾಣಗಿತ್ತಿ ಅಯ್ಯೋ ಅಂದರೆ ಮಂಗು ನೆತ್ತಿ ತಣ್ಣಗಾಗುವುದಿಲ್ಲ.'' ನಮಗೆ ಬೇಕಾದಷ್ಟು ಸೀಮೆಎಣ್ಣೆ ಕೊಡಿಸಿ. ಸುಮ್ಮನೆ ಉಡಾಫೆ ಹೊಡೆಯುವುದನ್ನು ದಯವಿಟ್ಟು ಬಿಡಿ ಸ್ವಾಮಿ.

ಶ್ರೀ ಎನ್. ಎಂ. ಅಡ್ಯಂತಾಯ.—ಇದು ಯಾವ ನ್ಯಾಯ ?

ಶ್ರೀ ಆರ್. ಎಲ್. ಜಾಲಪ್ಪ.—ನೀವು ಬಹಳ ನ್ಯಾಯಸ್ಥರು. ಆಕ್ಟ್ ವಜಾ ಮಾಡಿಸಿ. ತಮ್ಮ ಕೈಯಲ್ಲೇ ಅಧಿಕಾರ ಇದೆ. ಪಾರ್ಲಿಮೆಂಟ್‌ನಲ್ಲಿ ಮಾಡಿದರೆ ಅದನ್ನು ನಾವು ಒಬೇ ಮಾಡುತ್ತೇವೆ.

ಶ್ರೀ ಎನ್. ಎಂ. ಅಡ್ಯಂತಾಯ.—ಪೆಟ್ರೋಲ್ ಬಂಕ್ ಮೇಲೆ ಆಕ್ಷನ್ ತೆಗೆದುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಕೇಸ್ ವಜಾ ಮಾಡಿಸಿ ಅಂದರೆ ಆಕ್ಟೇ ವಜಾ ಮಾಡಿಸಿ ಎಂದು ಹೇಳುತ್ತೀರಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ವೆಂಕಟರಾಮಯ್ಯನವರು ಬಂದಿದ್ದಾಗ ನೀವು ಬೇಲ್ ಕೊಡಿ ಎಂದು ಹೇಳಿದೆ. ಅವರಿಗೆ ಯಾರು ಕೊಡುತ್ತಾರೆ ಬೇಲ್. ಆವರೇನಾದರೂ ತಪ್ಪಿಸಿಕೊಂಡು ಹೋದರೆ ಏನು ಮಾಡೋದು ಎಂದು ಹೇಳಿದರು.

ಶ್ರೀ ಆರ್. ವೆಂಕಟರಾಮಯ್ಯ.—ಇರುವ ವಿಚಾರ.

ಶ್ರೀ ಆರ್.ಎಲ್. ಜಾಲಪ್ಪ.—ಇರೋ ವಿಚಾರ ಎಂದು ಹೇಳುತ್ತಾರೆ. ಇವರು ಆಡ್ವೋಕೇಟ್. ಇಲ್ಲೂ ವಾದ ಮಾಡುತ್ತಾರೆ. ಅಲ್ಲೂ ವಾದ ಮಾಡುತ್ತಾರೆ. ಇನ್ನೊಂದು ಅಸೋಸಿಯೇಷನ್ನಿನವರು ಸೀಮೆ ಎಣ್ಣೆ ಹಾಕಿದ್ದು ನಿಜ ಎಂದು ಬರೆದು ಕೊಟ್ಟಿದ್ದಾರೆ. ಓನರ್ ಈ ಕೆಲಸ ಮಾಡುತ್ತಾರೆ, ಅವರ ಮೇಲೆ ಕೇಸ್ ಬುಕ್ ಮಾಡಿ ಎಂದು ಇವರು ಹೇಳುತ್ತಾರೆ. ಓನರ್‌ಗಳನ್ನು ಕೇಳಿದರೆ ನಮ್ಮ ಮೇಲೆ ಯಾತಕ್ಕೆ ಸ್ವಾಮಿ ಬುಕ್ ಮಾಡುತ್ತೀರಿ ; ನಾವು ಸರಿಯಾಗಿ ಆಟೋರಿಕ್ಷಾ ಓಡಿಸು ಎಂದರೆ ಸೀಮೆಎಣ್ಣೆ ಹಾಕಿ ಇಂಜಿನ್ನು ಹಾಳು ಮಾಡ್ತಾರೆ ಎಂದು ಹೇಳುತ್ತಾರೆ. ಆದ್ದರಿಂದ ಕೇಸ್‌ಗಳನ್ನು ವಿತ್‌ಡ್ರಾ ಹೇಗೆ ಮಾಡುವುದು ಸೀಮೆ ಎಣ್ಣೆ ಉಪಯೋಗಿಸಿರುವುದರಿಂದ ಕೇಸ್ ಹಾಕಿದ್ದಾರೆ. ನಾನು ಈಗಾಗಲೇ ಕಮಿಷನರ್‌ಗೆ ಹೇಳಿದ್ದೇನೆ. ಅವರ ಹತ್ತಿರ ಹೋಗಿ ಬೇಲ್ ಕೊಟ್ಟು ಮೊದಲು ಬಿಡಿಸಿಕೊಂಡು ಬರಲಿ. ಆಮೇಲೆ ಅವರ ಮೇಲೆ ಹಾಕಿರುವಂತಹ ಕೇಸನ್ನು ವಿತ್‌ಡ್ರಾ ಮಾಡಲುವುದಾದರೆ ಮಾಡೋಣ. ನಾವೇನೂ ಅವರೆಲ್ಲರನ್ನೂ ಜೈಗೆದುಕೊಂಡು ಹೋಗಿ ಜೈಲಿಗೆ ಹಾಕಬೇಕೆಂದೇನೂ ಇಲ್ಲ. ನಿಮಗೆ ಅವರ ಬಗ್ಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ನನಗೂ ಇದೆ. ಅವರೂ ಕೂಡ ಆಟೋರಿಕ್ಷಾ ಓಡಿಸಿ ರಾತ್ರಿ ೧೦ ರೂಪಾಯಿಗಳನ್ನು ತೆಗೆದುಕೊಂಡು ಹೋಗಿ ಜೀವನ ಮಾಡಬೇಕು. ನಾವೇನೂ ಹಿಂಸೆ ಮಾಡಿಲ್ಲ. ಪ್ಯಾಸೆಂಜರ್ಸ್‌ನ್ನು ಅವರೇ ಹೊಡೆದಿದ್ದಾರೆ. ಕೆಲವರು ಆಟೋರಿಕ್ಷಾಗಳನ್ನು ಓಡಿಸುತ್ತಿದ್ದರು. ಅವರಿಗೆ ಹಿಡಿದುಕೊಂಡು ಹೊಡೆದಿದ್ದಾರೆ. ೩ ಕಡೆ ಬಸ್ಸುಗಳಿಗೆ ಕಲ್ಲು ಹೊಡೆದಿದ್ದಾರೆ. ಆದರೂ ಅವರ ಮೇಲೆ ಕೈ ಮಾಡಿಲ್ಲ. ಆ ರೀತಿಯ ಅಭಿಪ್ರಾಯ ತಮಗೆ ಇರುವುದು ಬೇಡ. ಆ ಬಗ್ಗೆ ನಾನಾದರೂ ತಮ್ಮ ಮೂಲಕ ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಪ್ಯಾಸಿಕ್ಯೂಟರ್ ಹತ್ತಿರ ನೀವು ಪೊಮೊ ಹಾಕಿಸಿದರೆ ಬಿಟ್ಟು ಬಿಡುತ್ತಾರೆ.

ಶ್ರೀ ಆರ್. ಎಲ್. ಜಾಲಪ್ಪ.—ಅಲ್ಲಿಗೆ ಹೋಗಿ ಬೇಲ್ ಕೊಟ್ಟು ಬಿಡಿಸಿಕೊಂಡು ಬರಬೇಕು. ಸನ್ಮಾನ್ಯ ಸದಸ್ಯರು ಅವರ ಯೂನಿಯನ್‌ಗೆ ಸೇರಿದ್ದರೆ, ಅವರೇ ಹೋಗಿ ಬೇಲನ್ನು ಕೊಟ್ಟು ಎಲ್ಲರನ್ನೂ ಬಿಡಿಸಿಕೊಂಡು ಬರಲಿ ಕೇಸನ್ನು ವಿತ್‌ಡ್ರಾ ಮಾಡಿ ಎಂಬುದಾಗಿ ಮುಂದೆ ಅವರು ಅರ್ಜಿ ಕೊಡಲಿ. ಅದನ್ನು ಕನ್ಸಿಡರ್ ಮಾಡೋಣ. ಕಾನೂನು ಪ್ರಕಾರ ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಇದರ ಬಗ್ಗೆ ನಿಲುವಳಿ ಸೂಚನೆ ತರುವ್ರದು ಬೇಡ. ಪೆಟ್ರೋಲ್ ಬಂಕ್‌ನಲ್ಲಿ ಮಿಷ್ಟೇಕ್ ಆಗಿರಬಹುದೆಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ೧೪೨ ಪೆಟ್ರೋಲ್ ಬಂಕ್‌ಗಳನ್ನು ೨೬-೨-೧೯೮೮ ರಿಂದ ೧೫-೩-೧೯೮೮ ವರೆಗೆ ಚಕ್ ಮಾಡಿದ್ದೇವೆ. ಆದರಲ್ಲಿ ಮೂರು ಕೇಸ್‌ಗಳನ್ನು ಬುಕ್ ಮಾಡಿದ್ದೇವೆ. ಒಂದು ಷಾರ್ಟ್ ಮೆಸರ್‌ಮೆಂಟ್ ಇದ್ದದ್ದಕ್ಕೆ. ೨ರಲ್ಲಿ ಅಡಲ್ಟ್ರೇಷನ್ ಇರಬಹುದು ಎಂಬುದಾಗಿ ಅದರ ಸ್ಯಾಂಪಲ್ಲನ್ನು ಲ್ಯಾಬೋರೇಟರಿಗೆ ಕಳುಹಿಸಿದ್ದೇವೆ. ಲ್ಯಾಬೋರೇಟರಿಯಿಂದ ವರದಿ ಬಂದ ಮೇಲೆ ಅದರಲ್ಲಿ ತಪ್ಪು ಇದೆ ಎಂಬುದಾಗಿ ವರದಿಯಲ್ಲಿ ತಿಳಿಸಿದರೆ ಅವರ ಮೇಲೂ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎಸ್. ಬಂಗಾರಪ್ಪ.—ಅಡಲ್ಟ್ರೇಷನ್ ಇದೆ ಎಂಬುದಾಗಿ ಲ್ಯಾಬೋರೇಟರಿಯಿಂದ ವರದಿ ಬಂದರೆ, ಅದೇ ಪೆಟ್ರೋಲ್ ಬಂಕ್‌ನಿಂದ ಪೆಟ್ರೋಲನ್ನು ಹಾಕಿಸಿಕೊಂಡಿರುವಂತಹ ಆಟೋರಿಕ್ಷಾಗಳಲ್ಲಿ ನೀವು ಓಡಿದಿರುವಂತಹ ಆಟೋರಿಕ್ಷಾಗಳಲ್ಲಿ ಇದ್ದರೆ ?

ಶ್ರೀ ಆರ್. ಎಲ್. ಜಾಲಪ್ಪ.—ಅಲ್ಲೇ ಪೆಟ್ರೋಲ್ ಹಾಕಿಸಿಕೊಂಡಿದ್ದೇವೆಂದು ಅವರ ಬಗ್ಗೆ ಬಿಲ್ ಕೊಡಲಿ.

ಶ್ರೀ ಎಸ್. ಬಂಗಾರಪ್ಪ.—ಆ ಬಡಪಾಯಿಗಳ ಮೇಲೆ ತಮಗೆ ಏಕೆ ಇಷ್ಟೊಂದು ಕೋಪ.

ಶ್ರೀ ಆರ್. ಎಲ್. ಜಾಲಪ್ಪ.—ಅವರನ್ನು ಹಿಡಿದಾಗಲೇ ಇಂತಹ ಪೆಟ್ರೋಲ್ ಬಂಕ್‌ನಿಂದ ಪೆಟ್ರೋಲ್ ಹಾಕಿಸಿಕೊಂಡು ಬಂದಿದ್ದೇವೆಂದು ಹೇಳಿದ್ದರೆ ಸಂಬಂಧಪಟ್ಟ ಪೆಟ್ರೋಲ್ ಬಂಕ್‌ನವರ ಮೇಲೂ ಕ್ರಮ ತೆಗೆದುಕೊಳ್ಳಬಹುದಾಗಿತ್ತು. ಸನ್ಮಾನ್ಯ ವೆಂಕಟರಾಮಯ್ಯನವರು ಇಂತಹ

ಪೆಟ್ರೋಲ್ ಬಂಕ್‌ನಲ್ಲಿ ಅಡಲ್ಟ್ರೇಷನ್ ಪೆಟ್ರೋಲ್ ಅನ್ನು ಮಾರಾಟ ಮಾಡುತ್ತಿದ್ದಾರೆಂದು ಹೇಳಲಿ, ಇವತ್ತು ಸಂಜೆಯೊಳಗೇ ಚಕ್ ಮಾಡಿ, ತಪಂಗೆ ಆ ಬಗ್ಗೆ ವರದಿಯನ್ನು ಕೊಡುತ್ತೇನೆ.

ಶ್ರೀ ಎನ್. ಎಂ. ಅಡ್ಯಂತಾಯ.—ಪೆಟ್ರೋಲ್ ಬಂಕ್ ನವರು.....

ಅಧ್ಯಕ್ಷರು.—ದಯಾಮಾಡಿ ಕೂಡಿ.

ಶ್ರೀ ಎನ್ ಎಂ. ಅಡ್ಯಂತಾಯ.—ಮಾನ್ಯ ಮಂತ್ರಿಗಳೇ ಹೇಳಿದರು. ಪೆಟ್ರೋಲ್ ಬಂಕ್ ಚಕ್ ಮಾಡುವ ಸಂದರ್ಭದಲ್ಲಿ ಅಡಲ್ಟ್ರೇಷನ್ ಇರಬಹುದು ಎಂಬ ಸಂಶಯ ಬಂದು, ಪೆಟ್ರೋಲನ್ನು ಲ್ಯಾಬೋರೇಟರಿಗೆ ಕಳುಹಿಸಿದ್ದೇವೆಂದು, ಅದೇ ರೀತಿ ಆಟೋರಿಕ್ಷಾಗಳನ್ನು ಚಕ್ ಮಾಡುವಾಗಲೂ ಕೂಡ ಇದೇ ರೀತಿ ಮಾಡಬಹುದಿತ್ತಲ್ಲ, ಅಲ್ಲಿಂದ ಪರದಿ ಬಂದ ಮೇಲೆ ತಪ್ಪಿತಸ್ಥರ ಮೇಲೆ ಕೇಸುಗಳನ್ನು ಹಾಕಬಹುದಿತ್ತಲ್ಲ. ಅದನ್ನು ಬಿಟ್ಟು ಏಕಾ ಏಕಿ ಅವರ ಮೇಲೆ ಕೇಸುಗಳನ್ನ ಹಾಕಿರುವುದು ಏಕೆ ? ಆ ಬಡಪಾಯಿಗಳು ಅದರಿಂದ ಜೀವನ ಸಾಗಿಸುತ್ತಿದ್ದಾರೆ. ಅವರ ಮೇಲೆ ಏಕೆ ಕ್ರಮ ತೆಗೆದುಕೊಂಡಿದ್ದೀರಿ ದೊಡ್ಡ ದೊಡ್ಡ ಕಾಳಸಾರುಗಳು ತಪ್ಪು ಮಾಡಿರಬಹುದೆಂಬುದಾಗಿ ಹೇಳಿ ಅದನ್ನು ಟೆಸ್ಟಿಗೆ ಕಳುಹಿಸುವುದು ಏನಿದೆ.....

ಅಧ್ಯಕ್ಷರು.—ನೀವು ಈಲ್ಡ್ ಆದಿರಿ. ಅದಕ್ಕೆ ಅವರು ಮಾತನಾಡಿದರು, ಇನ್ನು ಮೇಲೆ ಈಲ್ಡ್ ಆಗಬೇಡಿ.

ಶ್ರೀ ಆರ್. ಎಲ್. ಜಾಲಪ್ಪ.—ನಾನು ಈಲ್ಡ್ ಆಗಲೇ ಇಲ್ಲ. ಮಾನ್ಯ ಅಡ್ಯಂತಾಯರು ಅವರಿಗೆ ಡಿಸ್ಟರ್ಬ್ ಮಾಡೇ ರೂಢಿ. ಇಲ್ಲೂ ಡಿಸ್ಟರ್ಬ್ ಮಾಡುತ್ತಾರೆ, ಹೊರಗಡೆಯೂ ಡಿಸ್ಟರ್ಬ್ ಮಾಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ,—ಹೀಗೆ ಅವರು ಮಾತನಾಡುವುದು ಸರಿಯಲ್ಲ,

ಶ್ರೀ ಆರ್.ಎಲ್. ಜಾಲಪ್ಪ.—ತಪ್ಪಾಪೆಗೆ ಹೇಳಿದೆ. ತಾವು ಏಕೆ ಸೀರಿಯಸ್ ತೆಗೆದುಕೊಳ್ಳುತ್ತೀರಿ?

ಶ್ರೀ ಎಸ್. ಬಂಗಾರಪ್ಪ.—ಅದು ನಿಮ್ಮಿಬ್ಬರ ವಿಚಾರ, ತಪ್ಪಾಪೆಯಾದರೆ ಸರಿ ಬಿಡಿ,

ಶ್ರೀ ಆರ್. ಎಲ್. ಜಾಲಪ್ಪ.—ಆಟೋದಲ್ಲಿ ಸೀಮೆ ಎಣ್ಣೆ ಮಿಕ್ಸ್ ಮಾಡಿದರೆ ಅದನ್ನು ನೇರವಾಗಿ ಕಂಡುಹಿಡಿಯುವುದಕ್ಕೆ ನಮ್ಮ ಇಲಾಖೆಯಲ್ಲಿ ಇನ್‌ಸ್ಟ್ರುಮೆಂಟ್ಸ್ ಇವೆ. ಅದರಿಂದ ನಾವು ಕಂಡುಹಿಡಿದಿದ್ದೇವೆ. ಎರಡನೆಯದಾಗಿ, ಎಸೆನ್ಸಿಯಲ್ ಕಂಟ್ರೋಲ್ ಆಕ್ಟ್ ಮೇಲೆ ಕೇಸ್ ಬುಕ್ ಮಾಡಿದ್ದೇವೆಯೇ ಹೊರತು ಪಲ್ಯೂಷನ್‌ಗೂ ಇದಕ್ಕೂ ಸಂಬಂಧ ಇಲ್ಲ. ಪಲ್ಯೂಷನ್ ಆಕ್ಟ್‌ನಲ್ಲಿ ನಾವು ಬುಕ್ ಮಾಡಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಿ ಸಾವಿರ ಆಟೋಗಳನ್ನು ಟೆಸ್ಟ್ ಮಾಡಿ (೯೨ನ್ನು ಹಿಡಿದಿದ್ದೀರಿ.

ಶ್ರೀ ಎನ್. ಎಂ. ಅಡ್ಯಂತಾಯ.—ಪಲ್ಯೂಷನ್ ಕಂಟ್ರೋಲ್ ಸಾಮಗ್ರಿಗಳು ನಿಮ್ಮ ಹತ್ತಿರ ಇರಬಹುದು. ಆದರೆ ಅಡಲ್ಟ್ರೇಷನ್ ಕಂಟ್ರೋಲ್ ಎಕ್ವಿಪ್‌ಮೆಂಟ್ಸ್ ನಿಮ್ಮಲ್ಲಿ ಇಲ್ಲ. ಅದು ಇದ್ದಿದ್ದರೆ ಅಲ್ಲೂ ಮಾಡಬಹುದು, ಇಲ್ಲೂ ಮಾಡಬಹುದು. ಮಾನ್ಯ ಮಂತ್ರಿಗಳು ಸರಿಯಾದ ಉತ್ತರವನ್ನು ಕೊಡಬೇಕು

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.—ನಾನು ಇಷ್ಟು ಮಾತ್ರ ಭರವಸೆಯನ್ನು ಕೊಡಬಲ್ಲೆ. ಈಗ ಏನು ೧೧೧ ಜನ ಜ್ಯುಡಿಷಿಯಲ್ ಕಸ್ಟಡಿಯಲ್ಲಿ ಇದ್ದಾರೆ, ಅವರನ್ನು ಜಾಮೀನು ಕೊಟ್ಟು ಬಿಡಿಸಿಕೊಂಡು ಬರಲಿ. ಆ ನಂತರ ಕಾನೂನು ಪ್ರಕಾರ ಸರ್ಕಾರದ ಮುಂದೆ ಅಪ್ಲಿಕೇಷನ್ ಹಾಕಲಿ...

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ನೀವು ಏನು ಸಹಾಯ ಮಾಡಿದ ಹಾಗೆ ಆಯಿತು?

ಶ್ರೀ ಆರ್. ಎಲ್. ಜಾಲಪ್ಪ —ನಾನು ಜಾಮೀನು ಕೊಡುವುದಕ್ಕೆ ಆಗುವುದಿಲ್ಲ. ನಾವೂ ಕ್ರಮ ಕೈಗೊಳ್ಳಿ ಎಂದು ಕೋರ್ಟಿಗೆ ಬರೆಯುವುದಕ್ಕೆ ಆಗುವುದಿಲ್ಲ. ಎಸೆನ್ಷಿಯಲ್ ಕಮಾಡಿಟೀಸ್ ಆಕ್ಟ್‌ನಲ್ಲಿ ೬೦ ಕ್ವಿಂಟಾಲ್ ಸ್ಟಾಕ್ ಇರಬೇಕೆಂದು ನಿಯಮ ಇರುತ್ತದೆ. ಮೇಲೆ ೫೦ ಕೇಜಿ ಇದ್ದರೂ ಕೂಡಾ that man has to be arrested and produced before the Sessions Court.

That is an unfortunate Act. What shall I do? I cannot help. ಇದನ್ನು ಕೇಂದ್ರ ಸರ್ಕಾರದವರು ಮಾಡಿರುವುದು. ನಾವು ಏನು ಮಾಡುವುದಕ್ಕಾಗುತ್ತದೆ?

(ಗೊಂದಲ)

We have to obey. This is a Central Act, Sir.

ಶ್ರೀ ಎಂ. ಎಂ. ಆರ್ಗೆ.—Ultimately you are the authority.

SRI N. M. ADYANTHEYA.—Sir,

SRI R, L. JALAPPA.—I have not yielded. Ho can not go on interrupting.

(ಗೊಂದಲ)

ಶ್ರೀ ಧರ್ಮಸಿಂಗ್.—ಭಾರತ್ ಬಂದ್‌ಗೆ ಅವರು ಬೆಂಬಲ ಕೊಡಲಿಲ್ಲ ಎಂದು ಹೇಳಿ ಈ ರೀತಿ ಮಾಡುತ್ತಿದ್ದೀರಾ?

(ಗೊಂದಲ)

ಶ್ರೀ ಆರ್, ಎಲ್. ಜಾಲಪ್ಪ....ಭಾರತ್ ಬಂದ್‌ಗೆ ಅವರು ವಿರೋಧ ಮಾಡಲಿಲ್ಲ. ಅವರೂ ಸಹಕಾರ ಕೊಟ್ಟಿದ್ದಾರೆ, ಕೊಡಲಿಲ್ಲ ಎಂದು ಹೇಳಿ ಅವರ ಮೇರ ಹೀನಕೃತ್ಯ ಮಾಡುವುದು ನಿಮಗೆ ಇರಬಹುದು. ಆದರೆ ನಮ್ಮ ಸರ್ಕಾರಕ್ಕೆ ಇಲ್ಲ. We are not such retched people. ಕಾಮಾಲೆ ಕಣ್ಣಿನವರಿಗೆ ಕಾಣುವುದೆಲ್ಲಾ ಹಳದಿಯು ಬಣ್ಣದಂತೆ. ದಯವಿಟ್ಟು ಕ್ಷಮಿಸಬೇಕು. ಇಂತಹ ಸಣ್ಣ. ನೀಚ ಪ್ರವೃತ್ತಿಯವರು ನಾವಲ್ಲ. In fact I am greatful to those people. They have cooperated with us,

(ಗೊಂದಲ)

ಶ್ರೀ ಧರ್ಮಸಿಂಗ್.—ಮತ್ತೆ ನಿಮಗೆ ಕೆರೋಸಿನ್ ವಿಕ್ಸ್ ಮಾಡುವುದು ಯಾವಾಗ ಗೊತ್ತಾಯಿತು?

(ಗೊಂದಲ)

ಶ್ರೀ ಆರ್ ಎಲ್. ಜಾಲಪ್ಪ,—ಆಟೋರಿಕ್ಷಾದವರನ್ನು ಕಾಪಾಡುವುದು ನೀವು ಒಬ್ಬರೇ ಅಲ್ಲ. ಅವರನ್ನು ಕಾಪಾಡುವ ಕರ್ತವ್ಯ ನಮಗೂ ಇದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಖಿರ್ಗಿಯವರು ಮಾತನಾಡುತ್ತಾ ಸಾರಿಗೆ ಮಂತ್ರಿಗಳ ಇಂಟರೆಸ್ಟ್ ಮೇಲೆ ಎನ್ನುವ ತಪ್ಪು ಮಾಹಿತಿ ಕೊಟ್ಟಿದ್ದಾರೆ. ಆಲ್ಲಿ ಆಲ್ಲಿ ಇಂಟಿಕ್‌ಗೆ ಸಂಬಂದಪಟ್ಟ ಯೂನಿಯನ್ ಇಲ್ಲ. ಸಿಪಿಎಂಗೆ ಸಂಬಂಧಪಟ್ಟ ಯೂನಿಯನ್ ಇದೆ, ಆಲ್ಲಿ ನನ್ನ ಸ್ನೇಹಿತರು,ನಿಮ್ಮ ಸ್ನೇಹಿತರು ಇರುವುದು ಬೇರೆ ಪ್ರಶ್ನೆ, ನನ್ನ ಹೆಸರನ್ನು ಇಲ್ಲಿ ತಂದಿದ್ದರಿಂದ, ಸಾರಿಗೆ ಮಂತ್ರಿಗಳ ಇಂಟರೆಸ್ಟ್ ಅಂದಿರುವುದರಿಂದ ಹೇಳಿದ್ದೇನೆ. ಸಿಪಿಎಂನವರು 'ಭಾರತ ಬಂದ್' ಗೆ ಕರೆ ಕೊಟ್ಟರು ಆಟೋರಿಕ್ಷಾದವರು ಆಟೋರಿಕ್ಷಾಗಳನ್ನು ರಸ್ತೆಯ ಪಕ್ಕದಲ್ಲಿ ಹಾಕಿದರು. ನಗರದಲ್ಲಿರತಕ್ಕ ಸಾರಿಗೆ ವ್ಯವಸ್ಥೆಯಲ್ಲಿ ಆಟೋರಿಕ್ಷಾವು ಒಂದು. ಅವರು ಯಾರಿಗೂ ತೀಸದಹಾಗೆ ಮುಷ್ಕರ ಮಾಡಿರುವುದರಿಂದ ನಗರದ ಕೆಲವು ಪ್ರಯಾಣಿಕರಿಗೆ ತೊಂದರೆಯಾಗಿರುವುದು ನಿಜ, ಅದನ್ನು ಗಮನದಲ್ಲಿಟ್ಟುಕೊಂಡು ನಿನ್ನೆ ಮೊನ್ನೆ ಸುಮಾರು ೨೦೦ ಆಡಿಷನಲ್ ಟ್ರಿಪ್ ನಷ್ಟು ಪೀಕ್ ಆವರ್ಸ್‌ಗಳಲ್ಲಿ ಬಸ್ಸುಗಳನ್ನು ಓಡಿಸಿದ್ದೇವೆ. ಅಗತ್ಯ ಬಿದ್ದರೆ ಇನ್ನು ಮುಂದೆ ನಗರದ ಸುತ್ತಮುತ್ತ ಇರತಕ್ಕ ಡಿಪೋಗಳಿಂದ ಬಸ್ಸುಗಳನ್ನು ತರಿಸಿ ನಗರದ ಪ್ರಯಾಣಿಕರಿಗೆ ತೊಂದರೆಯಾಗದ ರೀತಿಯಲ್ಲಿ ಕ್ರಮವನ್ನು ತೆಗೆದುಕೊಳ್ಳುವುದರ ಜೊತೆಗೆ ಎಕ್ಸ್‌ಟೆನ್‌ಷನ್ ಜೊತೆಗೆ ಆಡಿಷನಲ್ಲಿ ಬಸ್ಸುಗಳನ್ನು ಓಡಿಸಿ ಪ್ರಯಾಣಿಕರಿಗೆ ತೊಂದರೆಯಾಗದ ರೀತಿಯಲ್ಲಿ ಸರ್ಕಾರ ನೋಡಿಕೊಳ್ಳುತ್ತದೆ.

ಶ್ರೀ ಎನ್. ಎಂ. ಅಡ್ಯಂತಾಯ.—ಇಂಟಕ್‌ನ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ನಾನು ಇಂಟಕ್ ಅಧ್ಯಕ್ಷನಾಗಿರುವುದರಿಂದ ನಾನು ಆ ಬಗ್ಗೆ ಹೇಳಬೇಕಾಗಿಂತ್ತದೆ.

ಶ್ರೀ ಧರ್ಮಸಿಂಗ್.—ಮಾನ್ಯ ಸಿಂಧ್ಯರವರು ಇಂಟಕ್‌ಗೆ ಸಂಬಂಧಪಟ್ಟ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಅಡ್ಯಂತಾಯ ಅವರು ಮಾತನಾಡಲಿಕ್ಕೆ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು.—I have permitted hon. Member Kharge. ಅವರು ಮಾತನಾಡಿದ ಮೇಲೆ ಮಾನ್ಯ ಬಂಗಾರಪ್ಪನವರಿಗೆ ಮತ್ತು ಖರ್ಗೆಯವರಿಗೆ ಅವಕಾಶ ಕೊಡುತ್ತೇನೆ.

ಶ್ರೀ ಧರ್ಮಸಿಂಗ್.—ಮಾನ್ಯ ಬಂಗಾರಪ್ಪನವರಿಗೆ ಮತ್ತು ಖರ್ಗೆಯವರಿಗೆ ಅವಕಾಶ ಕೊಡುವುದು ಬೇರೆ. ಇಂಟಕ್‌ಗೆ ಸಂಬಂಧಪಟ್ಟ ವಿಚಾರವನ್ನು ಮಂತ್ರಿಗಳು ಹೇಳಿದ್ದಾರೆ. ಇಂಟಕ್‌ನ ಅಧ್ಯಕ್ಷರು ಸಭೆಯಲ್ಲಿದ್ದಾರೆ, ಅವರು ಏನು ಹೇಳುತ್ತಾರೆ ನೋಡೋಣ. ತಾವು ಅವರಿಗೆ ಅವಕಾಶ ಕೊಡಿ.

ಅಧ್ಯಕ್ಷರು.—ಆಮೇಲೆ ಅವರಿಗೆ ಅವಕಾಶ ಕೊಡೋಣ.

ಶ್ರೀ ಎಸ್. ಬಂಗಾರಪ್ಪ.—ಇಂಟಕ್‌ನ ವಿಚಾರವನ್ನು ಮಾನ್ಯ ಸಿಂಧ್ಯರವರು ಹೇಳಿದ ಇಂಟಕ್‌ನ ಅಧ್ಯಕ್ಷರಾಗಿರುವವರು ಇಲ್ಲಿದ್ದಾರೆ, ಅವರು ಅದಕ್ಕೆ ಉತ್ತರ ಕೊಡದಿದ್ದರೆ ಹೇಗೆ ? ನಾಳೆ ಏನಾಗುತ್ತದೆ? ಕ್ಲಾರಿಫಿಕೇಷನ್ ಕೇಳುವುದಿಲ್ಲ, ಆ ವಿಚಾರವನ್ನು ಅವರು ಹೇಳಿಬೇಕು.

ಅಧ್ಯಕ್ಷರು,—ಅವಕಾಶ ಕೊಡುತ್ತೇನೆ, ಮೊದಲು ಖರ್ಗೆಯವರು ಮಾತನಾಡಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಮಾತನಾಡಲಿ.

ಶ್ರೀ ಎನ್. ಎಂ. ಅಡ್ಯಂತಾಯ.—ಮಾನ್ಯ ಸಾರಿಗೆ ಮಂತ್ರಿಗಳು ಇಂಟಕ್‌ಗೆ ಸೇರಿದ ಆಟೋರಿಕ್ಷಾ ಯೂನಿಯನ್ ಇಲ್ಲ, ಸಿಐಟಿಯುಗೆ ಸೇರಿದ ಯೂನಿಯನ್ ಇದೆಯೆಂದು ಹೇಳಿದರು. ನನ್ನ ಮಟ್ಟಿಗೆ ನಾನಂ ಹೇಳುವುದಾದರೆ ಇದು ಸತ್ಯಕ್ಕೆ ದೂರವಾದ ಅಂಶ. ಆಟೋರಿಕ್ಷಾ ಯೂನಿಯನ್ ಸಿಐಟಿಯುದು ಇಲ್ಲ, ಇಂಟಕ್‌ದು ಇಲ್ಲ. ಯಾವುದಕ್ಕೂ ಸೇರದ ಸ್ವತಂತ್ರ ಸಂಘಟನೆಯಿದೆ.

ಶ್ರೀ ಆರ್. ವೆಂಕಟರಾವಪ್ಪ.—ಸಿಐಟಿಯುಗೆ ಸೇರಿದೆಯೇ ? ನೀವು ಹೇಳುವುದರಲ್ಲಿ ಸತ್ಯವಿಲ್ಲ ಅವರು ಹೇಳುವುದೆಲ್ಲ ಸತ್ಯವೆಂದು ಹೇಳುತ್ತಿದ್ದಾರೆ. ಅವರ ಯೂನಿಯನ್ನಿನ ವಿಷಯ ಅವರು ಹೇಳಿಕೊಳ್ಳಲಿ, ಅದನ್ನು ಬಿಟ್ಟು ಬೇರೆ ಏನೇನೋ ಹೇಳುವುದರಲ್ಲಿ ಸುಖವಿಲ್ಲ.

ಶ್ರೀ ಎನ್. ಎಂ. ಅಡ್ಯಂತಾಯ.—ಆ ಸಂಘಟನೆ ಸ್ವತಂತ್ರವಾದ ಸಂಘಟನೆ. ಎಷ್ಟೋ ಸಾವಿರಾರು ರಿಕ್ಷಾ ಡ್ರೈವರ್‌ಗಳು ಯಾವ ಸಂಘಟನೆಗೂ ಸೇರದವರು ಇದ್ದಾರೆ. ನಿಮ್ಮ ಸಂಘಟನೆಗೆ ಸೇರಿದವರನ್ನು ರಕ್ಷಣೆ ಮಾಡುವುದು ಇದು ಯಾವ ನ್ಯಾಯ ? ಕಾರ್ಮಿಕ ಮುಖಂಡರು ಸಂಘಟನೆಗಳಲ್ಲಿ ಕೆಲಸ ಮಾಡಬೇಕು,

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾನು ಏತಕ್ಕೆ ರೆಫರೆನ್ಸ್ ಮಾಡಿದೆ ಅಂದರೆ ಮಾನ್ಯ ಖರ್ಗೆಯವರು ಮತ್ತು ಬಂಗಾರಪ್ಪನವರು ಇಂಟಕ್‌ಗೆ ಅಪಿಲಿಯೇಟ್ ಆಗಿರತಕ್ಕ ಆಟೋರಿಕ್ಷಾ ಯೂನಿಯನ್‌ರವರನ್ನು ಮಾನ್ಯ ಗೃಹಸಚಿವರಂ ಪೋಲೀಸ್ ಕೇಸ್ ಹಾಕುವುದರ ಮೂಲಕ ಅವರಿಗೆ ತೊಂದರೆ ಕೊಡುತ್ತಿದ್ದಾರೆ ಅವರನ್ನು ಅರೆಸ್ಟ್ ಮಾಡುತ್ತಿದ್ದಾರೆಂದು ಹೇಳಿದ್ದಾರೆ ನನಗೆ ಗೊತ್ತಿರುವಹಾಗೆ ಇಂಟಕ್‌ಗೆ ಅಪಿಲಿಯೇಟ್ ಆಗಿರತಕ್ಕ ಒಂದು ಯೂನಿಯನ್ ಇಲ್ಲವೆಂದು ಹೇಳಿದ್ದೇನೆ.

ಶ್ರೀ ಎನ್ ಎಂ. ಅಡ್ಯಂತಾಯ.—ಇಂಟಕ್‌ಗೆ ಅಪಿಲಿಯೇಟ್ ಆದ ಆಟೋರಿಕ್ಷಾ ಡ್ರೈವರ್ಸ್ ಯೂನಿಯನ್ ಇದೆ. ಸಿಐಟಿಯುಗೆ ಅಪಿಲಿಯೇಟ್ ಆದದ್ದು ಇದೆ ಸ್ವತಂತ್ರವಾದ ಸಂಘಟನೆ ಇದೆ. ಯಾವ ಸಂಘಟನೆಗೂ ಸೇರದ ಬಡಪಾಯಿ ಡ್ರೈವರ್ಸ್‌ಗಳು ಇದ್ದಾರೆ.
ಆದ್ದರಿಂದ ಕಾರ್ಮಿಕ ಮುಖಂಡರು ಮತ್ತು ಕಾರ್ಮಿಕ ಸಂಘಟನೆಗಳು ಬರೀ ಆರ್ಗನೈಸ್ಡ್ ಆಗಿರತಕ್ಕಂಥ ವರನ್ನು ಮಾತ್ರ ರಕ್ಷಣೆ ಮಾಡುವುದು ಅಲ್ಲ. ಆರ್ಗನೈಸ್ಡ್ ಕಾರ್ಮಿಕರು ಯಾರು ಇದ್ದಾರೆ,

ಅವರನ್ನು ಆರ್ಗನೈಸ್ಡ್ ಮಾಡಿ ಅವರಿಗೆ ಯಾವ ರೀತಿಯಲ್ಲಿ ಶೋಷಣೆ ನಡೆಯುತ್ತಿದೆ ಎಂದು ತಿಳಿದು ಅವರಿಗೆ ಸರಿಯಾದ ಪರಿಹಾರವನ್ನು ಒದಗಿಸಿಕೊಡತಕ್ಕಂಥ ಜವಾಬ್ದಾರಿ ಅವರ ಮೇಲೆ ಇದೆ. ಇದು ಸರ್ಕಾರದ ಮೇಲೂ ಇದೆ, ನಮ್ಮ ಮೇಲೂ ಇದೆ.

ಶ್ರೀ ಧರ್ಮಸಿಂಗ್.— ನಿನ್ನೆ ಅವರು ಕಾಂಗ್ರೆಸ್ ಪ್ರೆಸಿಡೆಂಟ್ ಶ್ರೀ ಜನಾರ್ಧನ ಪೂಜಾರಿ ಅವರು ಕಾಂಗ್ರೆಸ್ ಪಕ್ಷದ ಕಛೇರಿಯಲ್ಲಿ ಭೇಟ್ಟಿಯಾಗಿದ್ದಾರೆ, ಪೋಲೀಸ್ ರಿಪೋರ್ಟ್‌ನ್ನು ತರಿಸಿನೋಡಿ ನೀವು ಉದ್ದೇಶಪೂರ್ವಕವಾಗಿ ಹೆರಾಸ್ ಮಾಡುತ್ತಿದ್ದೀರಿ ಎಂದು ಅವರು ಹೇಳಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ.— ಇದನ್ನು ನಾನು ಒಪ್ಪುವುದಿಲ್ಲ. ಒಂದು ಕಡೆಯೂ ಅವರ ಮೇಲೆ ಹೆರಾಸ್‌ಮೆಂಟ್ ಆಗಿಲ್ಲ. ಯಾರಿಗಾದರೂ ಹೊಡೆದಿದ್ದೇವೆ ಎಂದು ಅವರು ಹೇಳಲಿ.

(ಗೊಂದಲ)

ಶ್ರೀ ಧರ್ಮಸಿಂಗ್,— ನಮ್ಮ ಮೇಲೆ ಪೋಲೀಸರು ಅತ್ಯಾಚಾರ ಮಾಡುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ.

ಶ್ರೀ ಆರ್. ವೆಂಕಟರಾವಮಯ್ಯ.— ಇದರಲ್ಲಿ ಪಕ್ಷದ ರಾಜಕೀಯ ಇರಲಿಲ್ಲ. ಸಿ. ಐ. ಟಿ. ಯು ವರ್ಕರ್ಸ್‌ನ್ನೂ ಕರೆದುಕೊಂಡು ಹೋಗಿದ್ದೆವು. ಜಾಲಪ್ಪನವರ ಹತ್ತಿರ ಹೋಗಿದ್ದೆವು, ಕಮೀಶನರ್ ಹತ್ತಿರ ಹೋಗಿದ್ದೆವು ಕೇಸ್ ವಾಪಾಸ್ಸು ತೆಗೆದುಕೊಳ್ಳಿ ಎಂದು ಹೇಳಿದ್ದೇವೆ. ಇದಕ್ಕೆ ಸುಮ್ಮನೆ ಪಕ್ಷದ ರಾಜಕೀಯ ಏಕೆ ತರಬೇಕು ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಒಂದು ಮಾತನ್ನು ಶ್ರೀ ಸಿಂಧ್ಯಾ ಅವರು ಒಪ್ಪುತ್ತಾರೆಯೇ ಎಂದು ಕೇಳುತ್ತೇನೆ. ಭಾರತ್ ಬಂದ್‌ಗೆ ಸಿ. ಪಿ. ಐ., ಸಿ. ಪಿ. ಎಂ, ಜನತಾ ಪಾರ್ಟಿಯವರು ಎಲ್ಲರೂ ಸೇರಿ ಕರೆಯನ್ನು ಕೊಟ್ಟಿದ್ದರು. ಹೀಗೆ ಕರೆ ಕೊಟ್ಟಾಗ ಕಾಂಗ್ರೆಸ್ಸಿನ ಪರ ಇರುವವರು, ಸಿಂಪಥೈಸರ್ಸ್ ಬೇರೆ ವಾಹನಗಳನ್ನು ಓಡಿಸುತ್ತಿದ್ದರು. ನಿಮ್ಮ ರಿಪೋರ್ಟ್ ಪ್ರಕಾರ ಕತ್ತು ಆಟೋರಿಕ್ಷಾ ವಾಹನಗಳಾದರೂ ಓಡಿದ್ದವಲ್ಲ ?

ಶ್ರೀ ಆರ್. ಎಲ್. ಜಾಲಪ್ಪ.— ಈಗಲೂ ಓಡಾಡುತ್ತಿವೆ. ಇದರಲ್ಲಿ ಯಾರದ್ದೂ ಮೊನಾಪಲಿ ಇಲ್ಲ. ಇವತ್ತು ಅವರು ಏಟು ತಿಂದಿದ್ದಾರೆ. ಪೇಪರ್‌ನಲ್ಲಿ ಬಂದಿದೆ. ಹಿಡಿದು ನಿಲ್ಲಿಸಿ ಹೊಡೆದಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಅಧ್ಯಕ್ಷರೇ.....

ಅಧ್ಯಕ್ಷರು.— ನೀವು ಕ್ಲಾರಿಫಿಕೇಶನ್ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಅವರು ಏನು ಹೇಳಿದರೆಂದರೆ ಕಾಂಗ್ರೆಸ್ ಸಿಂಪಥೈಸರ್ಸ್ ಯಾರೂ ಇರಲಿಲ್ಲ, ಇಂಟಿಕ್‌ಗೆ ಸಂಬಂಧಪಟ್ಟವರು ಯಾರೂ ಇರಲಿಲ್ಲ ಎಂದು ಆ ದಿವಸ ಸಾವಿರಾರು ಆಟೋರಿಕ್ಷಾಗಳು ಓಡಾಡಿವೆ. ಆದರೆ ಇಂಟಿಕ್‌ಗೆ ಸಂಬಂಧಪಟ್ಟವರು ಯಾರೂ ಇರಲಿಲ್ಲ ಎಂದು ಹೇಳಿದರೆ ಅದು ಸತ್ಯಕ್ಕೆ ದೂರವಾದ ಅಂಶ. ಬಂದ್ ದಿವಸ ಸಾವಿರಾರು ಆಟೋರಿಕ್ಷಾಗಳನ್ನು ಓಡಿಸಿದ್ದಾರೆ, ಅನೇಕ ಜನ ಪ್ರಯಾಣಿಕರು ಅವುಗಳಲ್ಲಿ ಪ್ರಯಾಣ ಮಾಡಿದ್ದಾರೆ. ಇದು ಜನತಾ ಪಾರ್ಟಿ ಸಪೋರ್ಟಾಡ್ ಬಂದ್ ಅಲ್ಲ. ಕೆ. ಎಸ್. ಆರ್ ಟಿ. ಸಿ ಬಂದ್. ನೀವು ಏನೇ ಹೇಳಿದರೂ ಸಿಂಧ್ಯಾರವರೇ, ಇದಕ್ಕೆ ಮೂಲಕಾರಣ, ಅವರಿಂದಲೇ ಈ ಬಂದ್ ಆಯಿತು ಎಂದು ಹೇಳಬೇಕಾಗುತ್ತದೆ. ಅವರು ಬಸ್ಸುಗಳನ್ನು ಓಡಿಸದೇ ಇದ್ದಿದ್ದರೆ ಬಂದ್ ಇರುತ್ತಿರಲಿಲ್ಲ ಆ ಕ್ರೆಡಿಟ್ ಅವರಿಗೇ ಹೋಗಬೇಕು.

ಶ್ರೀ ಧರ್ಮಸಿಂಗ್.— ಬಸ್ಸುಗಳು ಬಂದ್ ಆಗದೇ ಹೋಗಿದ್ದರೆ ಭಾರತ್ ಬಂದ್ ಆಗುತ್ತಿರಲಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜು ಖಾರ್ಗೆ.— ನಾನು ಕೇಳುವುದು ಇಷ್ಟೆ. ಅನೇಕ ಜನ ಬಡವರು ಏನಿದ್ದಾರೆ ಅವರನ್ನು ಅರೆಸ್ಟ್ ಮಾಡಿದ್ದೀರಿ. ಯಾರ್ಯಾರ ಮೇಲೆ ಕೇಸುಗಳನ್ನು ಹಾಕಿದ್ದೀರೋ, ಅದನ್ನು ವಾಪಸ್ ತೆಗೆದುಕೊಂಡರೆ ಇದು ಮುಂದುವರೆಯುವುದಿಲ್ಲ. ಸುಮ್ಮನೆ ಹಾಗೆಯೇ ಬಿಟ್ಟರೆ ಅವರು ಬೇಲ್ ಮೇಲೆ ಹೋಗಬೇಕು. ಬೇಲ್ ಕೊಟ್ಟರೆ ಬಿಟ್ಟರೆ ಬಿಡುತ್ತಾರೆ ಇಲ್ಲದಿದ್ದರೆ ಇಲ್ಲ.

ಅದಕ್ಕೆ, ದಯವಿಟ್ಟು ನೀವೇ ಸರ್ಕಾರದಿಂದ ಮೆಮೋ ಫೈಲ್ ಮಾಡಿ, ಆ ಮೇಲೆ ವಿತ್‌ಡ್ರಾ ಮಾಡಿಕೊಳ್ಳಬೇಕು. ದಯವಿಟ್ಟು ಕೇಸ್‌ಗಳನ್ನು ವಿತ್‌ಡ್ರಾ ಮಾಡಿಕೊಳ್ಳಿ. ಯೂನಿಯನ್‌ರವರನ್ನು ಕರೆಸಿ, ಜೊತೆಗೆ ಇದಕ್ಕೆ ಸಂಬಂಧಪಟ್ಟವರು ಯಾರ್ಯಾರು ಇದ್ದಾರೆ ಇಂಡಿಪೆಂಟ್‌ನವರು ಯಾರು ಇದ್ದಾರೆ ಅವರನ್ನೆಲ್ಲಾ ಕರೆಸಿ, ಮಾತುಕತೆ ಮಾಡಿ ಇದನ್ನು ಬಗೆಹರಿಸಬೇಕು. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದೆ. ಅದರಲ್ಲೂ ಮುಖ್ಯವಾಗಿ ವಿದ್ಯಾರ್ಥಿಗಳಿಗೆ ಪರೀಕ್ಷೆಯ ಸಮಯದಲ್ಲಿ ತೊಂದರೆಯಾಗುತ್ತಿದೆ. ಆದ್ದರಿಂದ ಕೂಡಲೇ ಕ್ರಮ ಕೈಗೊಳ್ಳುತ್ತೀರೆಂದು ನಾನು ನಂಬಿದ್ದೇನೆ.

ಶ್ರೀ ಆರ್. ಎಲ್. ಜಾಲಪ್ಪ.— ಈಗಾಗಲೇ ನಾನು ಹೇಳಿದ್ದೇನೆ. ಈಗ ಒಳಗಡೆ ಇರತಕ್ಕ ೧೧೧ ಜನರು ಏನಿದ್ದಾರೆ, ಅವರುಗಳು ಜಾಮೀನು ಕೊಟ್ಟು ಬಿಡಿಸಿಕೊಳ್ಳಲಿ ಆಮೇಲೆ ಕೇಸ್ ವಿತ್‌ಡ್ರಾ ಮಾಡಿಕೊಳ್ಳಿ ಎಂದರೆ. Government will certeainly consider is ನಮಗೆ ಅವರ ಹೊಟ್ಟೆ ಮೇಲೆ ಹೊಡೆಯಬೇಕೆಂದು ಇಲ್ಲ. ನಾನು ಅವರನ್ನು ರೈಡ್ ಮಾಡಿ ಎಂದು ಹೇಳಿಲ್ಲ. ಕಾನೂನು ಪ್ರಕಾರ ಮಾಡಿದ್ದಾರೆ. ಈ ಬೈಕ್ ಲ್ಯಾಂಪ್ಸ್, ಟೈಲ್ ಲ್ಯಾಂಪ್ಸ್, ಇಂಡಿಕೇಟರ್ಸ್, ಹೊಗೆ ಯಾವ ವಾಹನಗಳು ಹೆಚ್ಚು ಉಗುಳುತ್ತವೆ ಇಂತಹವುಗಳ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದೇವೆ. ಬರುಬರುತ್ತಾ ಅಪಘಾತಗಳು ಜಾಸ್ತಿಯಾಗುತ್ತಿವೆ. ಆದುದರಿಂದ ಈ ಬಗ್ಗೆ ಚೆಕ್ ಮಾಡುವುದು ಸರ್ಕಾರದ ಕರ್ತವ್ಯ, ಅದನ್ನು ಮಾಡಿದ್ದೇವೆ. ನಾನು ಇನ್ನೊಂದುಸಾರಿ ಹೇಳುತ್ತೇನೆ. ಇದಕ್ಕಾಗಿ ಅಡ್ಜರ್ನ್‌ಮೆಂಟ್ ಮೋಷನ್ ತರುವುದು ಅನಾವಶ್ಯಕ, ನಾನು ಭರವಸೆ ಕೊಡುತ್ತೇನೆ. ಮಾನ್ಯ ವಿರೋಧ ಪಕ್ಷದವರಿಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ನಮಗೂ ಇದೆ. ಇವರೂ ನಮ್ಮ ರಾಜ್ಯದ ಪ್ರಜೆಗಳು, ಅವರಲ್ಲಿ ಮುಕ್ಕಾಲು ಭಾಗ ನಮ್ಮ ಸಪೋರ್ಟರ್ಸ್ ಇದ್ದಾರೆ ..

ಶ್ರೀ ಧರ್ಮಸಿಂಗ್.— ನೀವು ಇನ್ನು ಕನಸನ್ನು ಕಾಣಬೇಡಿ, ಆ ಒಂದು ಕಲ್ಪನಾಲೋಕದಲ್ಲಿ ಇರಬೇಡಿ...

ಶ್ರೀ ಆರ್. ಎಲ್. ಜಾಲಪ್ಪ.— ಇನ್ನೊಂದು ಕಾಂಗ್ರೆಸ್‌ನವರ ಹತ್ತಿರ ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ. ಈ ಪೆಟ್ರೋಲ್ ಬೆಲೆ ಜಾಸ್ತಿ ಮಾಡಿದ ಮೇಲೆ, ಈ ರೀತಿ ಮಿಕ್ಸ್ ಮಾಡುವುದು ಜಾಸ್ತಿ ಯಾಯಿತು. ಆದುದರಿಂದ ಅವರು ಕೇಂದ್ರಕ್ಕೆ ಮನವಿ ಮಾಡಿ ಕನಿಕರ ಮಾಡಿ, ಈ ಬೆಲೆಯನ್ನು ಒಂದು ರೂಪಾಯಿ ನಷ್ಟವಾದರೂ ಕಡಿಮೆ ಮಾಡಿ ಎಂದು ಹೇಳಬೇಕೆಂದು ಎರಡು ಕೈ ಜೋಡಿಸಿ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಈ ದೇಶದಲ್ಲಿ ಪೆಟ್ರೋಲ್ ಬೆಲೆ ಏಕೆ ಜಾಸ್ತಿ ಮಾಡಿದ್ದಾರೆ ಎಂಬ ಬಗ್ಗೆ ಕೇಂದ್ರ ಸರ್ಕಾರದವರು ಈಗಾಗಲೇ ಹೇಳಿದ್ದಾರೆ. ಅದರ ಬಗ್ಗೆ ಚರ್ಚೆ ಮಾಡುವುದಕ್ಕಲ್ಲ ಈ ಸದನ ಇರುವುದು. ನಾನು ಈ ಬಗ್ಗೆ ಹೆಚ್ಚು ವಿವರಗಳಿಗೆ ಹೋಗುವುದಿಲ್ಲ. ಪರಿಸ್ಥಿತಿ ವಿವರಿಸುತ್ತ ಅದಕ್ಕೆ ವಿವರಣೆ ಕೊಟ್ಟಿದ್ದಾರೆ. ಆಂಧ್ರದಲ್ಲಿ ಎನ್. ಟಿ. ಆರ್, ಅವರು ಒಂದು ಲೀಟರ್‌ಗೆ ಒಂದು ರೂಪಾಯಿ ರಿಯಾಯಿತಿ ಕೊಟ್ಟಿರುತ್ತಾರೆ. ನೀವು ಕೂಡ ಒಂದೆರಡು ರೂಪಾಯಿಗಳ ವಿನಾಯಿತಿ ಏಕೆ ಕೊಡಬಾರದಿತ್ತು. ಸೇಲ್ಸ್ ಟ್ಯಾಕ್ಸ್ ಬೇಡ, ರದ್ದು ಮಾಡಿ. ಇದು ಒಂದು ವಿಚಾರ. ಎರಡನೇ ವಿಚಾರ, ಮಾನ್ಯ, ಜಾಲಪ್ಪನವರು ಹೇಳಿದರಂ, ಅವರಲ್ಲ. ಎಲ್ಲರೂ ನಮ್ಮ ವೋಟು ದಾರರು ಎಂದು. ಆಟೋರಿಕ್ಷಾದವರು, ಲಾರಿ ಡ್ರೈವರ್ಸ್, ಈ ದೇಶದಲ್ಲಿರತಕ್ಕಂಥ ರೈತರಂ ಇನ್ನು ಯಾರ್ಯಾರು ಇದ್ದಾರೆ ಇವರೆಲ್ಲರೂ ನಿಮ್ಮವರೇ. ಇವರಿಗೆ ಪೂರ್ತಿ ಸೌಲಭ್ಯ ಕೊಡಿ, ವೋಟು ನೀವೇ ತೇಗೆದುಕೊಳ್ಳಿ. ನಿಮಗೆ ಅಧಿಕಾರ ಇದೆಯಲ್ಲ. ನೀವೇ ಮಂಂದೆಯೂ ಗೂಟ ಹೊಡೆದು ಕೊಂಡು ಇರಿ. ಜನ ತಿರುಗಿ ಬಿದ್ದಾಗ ನೀವು ಉಳಿಯುವುದಿಲ್ಲ. ನಾವೂ ಉಳಿಯುವುದಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.— ನಿಮ್ಮ ಔದಾರ್ಯಕ್ಕೆ ವಂದನೆಗಳನ್ನರ್ಪಿಸುತ್ತೇನೆ. ನಾವು ಇಲ್ಲಿರುವುದಕ್ಕೆ ಅವರ ಕಾಂಟ್ರಿಬ್ಯೂಷನ್ ಏನೂ ಇಲ್ಲ, ಪುಣ್ಯಾತ್ಮರು ಆರಿಸಿ ಕಳುಹಿಸಿದ್ದಾರೆ. ನಾವು ಮಾಡುವ ಕೆಲಸ ಸರಿ ಇಲ್ಲ ಎಂದರೆ, ನಾವು ಅಲ್ಲಿಗೆ ಬರುತ್ತೇವೆ. ನೀವು ೩೫ ವರ್ಷಗಳ ಕಾಲ ಭಗಿನಿ ಗೂಟ ಹೊಡೆದುಕೊಂಡು ನಮ್ಮ ಕಡೆ ಕುಳಿತಿದ್ದಿರಿ. ಆ ಗೂಟವನ್ನು ಜನ ಕಿತ್ತು ಬಿಸಾಡಿದ್ದಾರೆ. ನಿಮಗೆ ಹೊಡೆಸಿಕೊಂಡು ರೂಢಿ, ಹೊಡೆಸಿಕೊಳ್ಳಿ. ಆದರೆ ನಮ್ಮ ವಿರೋಧಪಕ್ಷದ ಉಪನಾಯಕರಲ್ಲಿ ಕಳಕಳಿಯ ಮನವಿ ಏನೆಂದರೆ, ಇದಕ್ಕೆ ಅಡ ರ್ನ್‌ಮೆಂಟ್ ಮೋಷನ್ ಬೇಕಾಗಿಲ್ಲ. ಈ ಜನರ ಬಗ್ಗೆ

ನಿವಂಗೆಷ್ಟು ಕಳಕಳಿ ಇದೆಯೋ, ಅಷ್ಟೇ ಕಳಕಳಿ ನಮಗೂ ಇದೆ. ರಿಕ್ಷಾದರವರ ಮಕ್ಕಳುಮರಿಗಳಿಗೆ ತೊಂದರೆ ಮಾಡಬೇಕೆಂದು ನಮ್ಮ ಉದ್ದೇಶ ಇಲ್ಲ. ಇದು ಕೇಂದ್ರ ಸರ್ಕಾರದ ಕಾನೂನು...

ಶ್ರೀ ಎನ್. ಎಂ. ಅಡ್ಯಂತಾಯ.— ಯಾವ ಕೇಂದ್ರ ಸರ್ಕಾರದ ಕಾನೂನು...

ಶ್ರೀ ಆರ್. ಎಲ್. ಜಾಲಪ್ಪ.— I will certainly oblige him, ಒಂದು ವಿಷಯ ವನ್ನು ಮಾನ್ಯ ಖರ್ಗೆಯವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ,

೧೧–೩೦ ಎ. ಎಂ.

ಬೆಂಗಳೂರು ನಗರದಲ್ಲಿ ಪಲ್ಯೂಷನ್ ಜಾಸ್ತಿಯಾಗುತ್ತಿದೆ. ಆದೂ ಆನಂದರಾವ್ ಸರ್ಕಲ್‌ನಲ್ಲಿ ಇಡೀ ರಾಷ್ಟ್ರದಲ್ಲಿ ಎಲ್ಲಾಕಡೆಗಿಂತ ಪಲ್ಯೂಷನ್ ಜಾಸ್ತಿಯಾಗಿದೆ ಎಂದು ವರದಿ ಬಂದಿದೆ. ಇದೂ ಸಹ ಅದರ ಜೊತೆಗೆ ಸೇರಿಕೊಂಡ ಕಾರಣ ಬೆಂಗಳೂರು ನಗರದ ನಾಗರೀಕರ ಜೀವನ ನರಕವಾಗುತ್ತಿದೆ. ಇದು ನನ್ನ ಅಭಿಪ್ರಾಯ. ಲಕ್ಷಾಂತರ ಮರಗಳನ್ನು ಹಾಕಿದ್ದೇವೆ. ಆದರೂ ಸಹ ಪಲ್ಯೂಷನ್ ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲ. ಇದರಲ್ಲಿ ಕಾರ್ಬನ್ ಮಾನಾಕ್ಸೈಡ್ ಉತ್ಪತ್ತಿಯಾಗುತ್ತದೆ. ಎಂದು ಗೊತ್ತಾಗಿದೆ. ಇದು ಬ್ಲಡ್‌ನಲ್ಲಿ ಹೋಗಿ it will have effect on the brain also. ಅದನ್ನೂ ನಾವು ನೋಡಬೇಕಾಗುತ್ತದೆ. ಇದರ ಬಗ್ಗೆ ಯೋಚನೆ ಮಾಡಿ ನಾವು ಅವರಿಗೆ ರಿಕ್ವೆಸ್ಟ್ ಮಾಡಿಕೊಂಡಿದ್ದೇವೆ. ಆಟೋರಿಕ್ಷಾ ಅಸೋಸಿಯೇಷನ್‌ನವರಿಗೆ ರಿಕ್ವೆಸ್ಟ್ ಮಾಡಿಕೊಂಡಿದ್ದೇನೆ. ಇನ್ನು ಮೇಲಾದರೂ ದಯವಿಟ್ಟು ಸೀಮೆಎಣ್ಣೆ ಉಪಯೋಗ ಮಾಡಬೇಡಿ ಎಂದು, ಈಗ ಅರೆಸ್ಟ್ ಆಗಿರುವ ವರೆಲ್ಲ ಬೇಲ್ ಮೇಲೆ ಬರಲಿ, ಮಿಕ್ಕಿದ್ದು ನಾವೆಲ್ಲರೂ ಸೇರಿ ಆಮೇಲೆ ನೊಡೋಣ ಎಂದು ಹೇಳಿದ್ದೇನೆ. ಆದುದರಿಂದ ದಯವಿಟ್ಟು ತಾವು ಅಡ್‌ಜರ್ನ್‌ಮೆಂಟ್ ಮೋಷನ್‌ಗೆ ಆರ್ಜ್ ಮಾಡಬಾರದು.

ಅಧ್ಯಕ್ಷರು.—ಎರಡೂ ಕಡೆಯ ವಾದವನ್ನು ಕೇಳಿದ್ದೇನೆ, ಇನ್ನು ಸಾಕು.

ಶ್ರೀ ಪುಲ್ಲಿಕಾರ್ಜುನ ಎಂ. ಖರ್ಗೆ;—ಎಸೆನ್‌ಷಿಯಲ್ ಕಮಾಡಿಟೀಸ್ ಆಕ್ಟ್ ಗೌರ್ನಮೆಂಟ್ ಆಫ್ ಇಂಡಿಯಾದ್ದು. ಇದು ಅವರಿಗೂ ಗೊತ್ತಿದೆ. ಬೇರೆ ಎಲ್ಲ ಕಾನೂನುಗಳು ಸಹ ಕೇಂದ್ರ ಸರಕಾರದಿಂದ ಬರುತ್ತವೆ. ನಮ್ಮಲ್ಲಿ ಪೋಲೀಸ್ ಆಕ್ಟ್ ಮುಂತಾದವುಗಳನ್ನು ನಾವು ಮಾಡಿಕೊಳ್ಳುತ್ತೇವೆ. ನಾನು ಆ ಕಾನೂನು ಪ್ರಕಾರ ಆಕ್ಟ್ ಮಾಡಬೇಡಿ ಎಂದ ಹೇಳುವುದಿಲ್ಲ ಕಾನೂನು ಇಂಪ್ಲಿಮೆಂಟ್ ಮಾಡಬೇಡಿ ಎಂದು ನಾನು ಹೇಳುವುದಿಲ್ಲ. ಈಗ ಏನು ತೊಂದರೆಯಾಗಿದೆ ಅದನ್ನು ನಿವಾರಣೆ ಮಾಡುವುದಕ್ಕೋ ಸ್ಥಳ ಸಿಂಪಥೆಟಿಕ್ ಆಗಿ ಕನ್ಸಿಡರ್ ಮಾಡಿ ನೀವೆ ಕುಳಿತುಕೊಂಡು, ಆದಷ್ಟು ಬೇಗನೆ ಇವತ್ತು ಸಾಯಂಕಾಲದ ಒಳಗೆ ಅವರನ್ನು ಕರೆಸಿ ಚರ್ಚೆ ಮಾಡಿ ಈ ಒಂದು ಸ್ಟೆಲ್‌ಮೇಟ್ ಮುಕ್ತಾಯ ಮಾಡಿಸಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಅವರ ಸಲಹೆಯನ್ನು ನೋಟ್ ಮಾಡಿಕೊಳ್ಳಿ. ಈಗ ಎರಡೂಕಡೆಯ ವಾದವನ್ನು ಕೇಳಿದ್ದೇನೆ. ಈ ನಿಲುವಳಿ ಸೂಚನೆಗೆ ನನ್ನ ಅನುಮತಿಯನ್ನು ನಿರಾಕರಿಸಿದ್ದೇನೆ. ಇನ್ನು ಗಮನ ಸೆಳೆಯುವ ಸೂಚನೆಗಳು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ,—ಅವರು ಸಾಯಂಕಾಲದ ಒಳಗೆ ಕರೆಸಿ ಚರ್ಚೆ ಮಾಡುತ್ತೇ ನೆಂದು ಹೇಳಲಿಲ್ಲ. ತಲೆ ಆಲ್ಲಾಡಿಸಿದರೆ ರೆಕಾರ್ಡ್‌ಗೆ ಹೋಗುವುದಿಲ್ಲ. ನಾನು ಮಾಡುತ್ತೇನೆ ಎಂದು ಹೇಳಲಿ.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ್ದೇನೆ. ೧೧೧ ಜನ ಏನು ಜ್ಯುಡಿಷಿಯಲ್ ಕಸ್ಟಡಿಯಲ್ಲಿದ್ದಾರೆ ಅವರು ಬೇಲ್ ಮೇಲೆ ಬಿಡಿಸಿಕೊಂಡು ಬರಲಿ. ಅವರು ಬಂದಾಗ ನಾನು ಅವರಿಗೆ ಹೇಳಿದ್ದೇನೆ. ನನ್ನ ಮೇಲೆ ಈ ರೀತಿ ಮಾಡಬೇಡಿ. ಅವರು ಬೇಲ್ ಮೇಲೆ ಬರಲಿ, ನಂತರ ಕೇಸ್ ವಿಥ್‌ಡ್ರಾ ಮಾಡುವುದನ್ನು ಕನ್ಸಿಡರ್ ಮಾಡೋಣ ಎಂದು ಹೇಳಿದ್ದೇನೆ. ಇದಕ್ಕಿಂತ ಇನ್ನು ಏನನ್ನು ಹೇಳಲಿ ನಾನು.

ಶ್ರೀ ಆರ್. ವೆಂಕಟರಾಮಯ್ಯ.— ಕೋರ್ಟಿಗೆ ಹಾಕುತ್ತಾರೆ, ಇದಕ್ಕೆ ಒಪ್ಪಿಕೊಂಡರೆ ಒಳ್ಳೆಯದು.

ಶ್ರೀ ಆರ್. ಎಲ್. ಜಾಲಪ್ಪ.—ದುರಾದೃಷ್ಟವಶಾತ್ ಇದೆಲ್ಲವನ್ನೂ ಲೋಯರ್ ಕೋರ್ಟ್‌ನಲ್ಲಿ ಹಾಕುವುದಿಲ್ಲ. ಇದೆಲ್ಲವನ್ನೂ directly ಸೆಷನ್ಸ್ ಕೋರ್ಟಿನಲ್ಲಿ ಫೈಲ್ ಮಾಡುತ್ತಾರೆ. ಅಲ್ಲಿ ಏನು ಮಾಡುವುದಕ್ಕೂ ಆಗುವುದಿಲ್ಲ.

ಗಮನ ಸೆಳೆಯುವ ಸೂಚನೆಗಳು

(1) ವಿಧಾನಸಭಾ ಸದಸ್ಯ ಶ್ರೀ ಎಂ.ಎಸ್ ಕೃಷ್ಣನ್ ಮತ್ತು ಅವರ ಅನುಯಾಯಿಗಳ ಮೇಲೆ ಬೆಂಗಳೂರು ನಂದಿನಿ ಲೇಔಟ್‌ನಲ್ಲಿ ನಡೆದಿರುವ ಹಲ್ಲೆಯ ವಿಚಾರ.

ಶ್ರೀ ಟಿ. ಎಸ್. ಮಣಿ.—ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ನಂದಿನಿ ಲೇಔಟ್‌ನಲ್ಲಿ ದಿನಾಂಕ ೨-೩-೧೯೮೮ ರಂದು ವಿಧಾನಸಭಾ ಸದಸ್ಯರಾದ ಶ್ರೀ ಎಂ. ಎಸ್. ಕೃಷ್ಣನ್ ಹಾಗೂ ಅವರ ಅನುಯಾಯಿಗಳ ಮೇಲೆ ನಡೆದಿರುವ ಹಲ್ಲೆಯ ಬಗ್ಗೆ ಮಾನ್ಯ ಗೃಹಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಆರ್. ಎಲ್ ಜಾಲಪ್ಪ (ಮಾನ್ಯ ಗೃಹ ಮಂತ್ರಿಗಳು) —ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ಗಮನ ಸೆಳೆಯುವ ಸೂಚನೆಗೆ ಈ ಲಿಖಿತ ಹೇಳಿಕೆಯನ್ನು ತಮ್ಮ ಅನುಮತಿಯನ್ನು ಪಡೆದು ನೀಡಲು ಬಯಸುತ್ತೇನೆ.

ದಿನಾಂಕ ೨೯-೨-೮೮ ಮತ್ತು ೧-೩-೮೮ ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಂದಿನಿ ಲೇ ಔಟ್‌ನಲ್ಲಿ ಅಕ್ರಮವಾಗಿ ಕಟ್ಟಿದ್ದ ಕಟ್ಟಡಗಳನ್ನು ನೆಲಸಮ ಮಾಡಿತ್ತು. ಆಬಗ್ಗೆ ವಿಚಾರಿಸಲು ದಿನಾಂಕ ೨-೩-೮೮ ರಂದು ಬೆಳಿಗ್ಗೆ ೧೦-೩೦ ಗಂಟೆಗೆ ಶ್ರೀ ಎಂ. ಎಸ್. ಕೃಷ್ಣನ್, ವಿಧಾನ ಸಭಾ ಸದಸ್ಯರು ತಮ್ಮ ಅನುಯಾಯಿಗಳಾದ ಶ್ರೀ ಮೋಹನರಾಂ, ಶ್ರೀ ಗಣಪತಿ ಮತ್ತು ಇತರೆ ಇಬ್ಬರೊಡನೆ ಭೇಟಿ ಕೊಟ್ಟಿರುತ್ತಾರೆ. ಅವರು ತಮ್ಮ ಕಾರಿನಲ್ಲಿ ಸಂಚರಿಸುತ್ತಿರುವಾಗ ಕೆಲವೊಂದು ಜನರು ಅವರನ್ನು ಹಿಂದಿನ ಎರಡು ದಿನಗಳಲ್ಲಿ ನೆಲಸಮ ಕಾರ್ಯ ನಡೆಯುವಾಗ ಏಕೆ ಭೇಟಿ ಕೊಡಲಿಲ್ಲ ಎಂದು ಪ್ರಶ್ನಿಸಿರುತ್ತಾರೆ. ಶ್ರೀ ಕೃಷ್ಣನ್‌ರವರ ವಿವರಣೆಯು ತೃಪ್ತಿಕರವಾಗಿಲ್ಲವೆಂದು ಕೆಲವು ಜನರು ಶಾಸಕರ ಮೇಲೆ ಕೈಗಳಿಂದ ಮತ್ತು ದೊಣ್ಣೆಗಳಿಂದ ಹಲ್ಲೆ ನಡೆಸಿರುತ್ತಾರೆ ಅವರುಗಳು ಶಾಸಕರ ಕಾರಿನ ಮುಂದಿನ ಗಾಜನ್ನು ಒಡೆದಿರುತ್ತಾರೆ. ಶ್ರೀ ಎಂ.ಎಸ್. ಕೃಷ್ಣನ್‌ರವರ ಅನುಯಾಯಿಗಳಾದ ಶ್ರೀ ಮೋಹನರಾಂ ಮತ್ತು ಶ್ರೀ ಗಣಪತಿ, ಶ್ರೀ ಕೃಷ್ಣನ್‌ರವರ ಮೇಲೆ ಹಲ್ಲೆ ನಡೆಯುತ್ತಿದ್ದನ್ನು ತಪ್ಪಿಸಲು ಪ್ರಯತ್ನಿಸಿದಾಗ ಅವರಿಗೂ ಸಹ ಹೊಡೆಯುಲಾಗಿ ಕೆಲವೊಂದು ಸಣ್ಣಪುಟ್ಟ ಗಾಯಗಳು ಕೆನ್ನೆಯ ಮೇಲೆ ಆಗಿರುತ್ತವೆ ಶ್ರೀ ಕೃಷ್ಣನ್‌ರವರಿಗೆ ಮುಖದ ಮೇಲೆ ಮತ್ತು ಬೆನ್ನ ಮೇಲೆ ಬಾಸುಂಡೆಗಳು ಬಂದಿರುತ್ತದೆ. ಈ ಘಟನೆ ನಡೆದ ನಂತರ ಶ್ರೀ ಕೃಷ್ಣನ್‌ರವರು ಆರ್ ಎಂ ಸಿ. ಪೊಲೀಸ್ ಸ್ಟೇಷನ್‌ಗೆ ಹೋಗಿ ವಿಷಯವನ್ನು ತಿಳಿಸಿರುತ್ತಾರೆ. ಗಾಯಗೊಂಡ ಮೂವರು ಕೆ.ಸಿ ಜನರಲ್ ಆಸ್ಪತ್ರೆಗೆ ಹೋಗಿ ಅಲ್ಲಿ ಸ್ವತಃ ಹೊರರೋಗಿಗಳಾಗಿ ಚಿಕಿತ್ಸೆ ಪಡೆದಿರುತ್ತಾರೆ. ಈ ಬಗ್ಗೆ ಮಂಹಾಲಕ್ಷ್ಮಿ ಪೊಲೀಸ್ ಠಾಣೆಯವರು ಕೇಸು ದಾಖಲು ಮಾಡಿಕೊಂಡಿರುತ್ತಾರೆ.

ಮೇಲಿನ ಕೇಸಿಗೆ ಸಂಬಂಧಪಟ್ಟ ಅಪರಾಧಿಗಳಾದ (೧) ಶ್ರೀ ಸತ್ಯನಾರಾಯಣ (೨) ಶ್ರೀ ಅಶ್ವತ ನಾರಾಯಣಗೌಡ (೩) ಶ್ರೀ ಎಸ್. ಕೃಷ್ಣಪ್ಪ ಅಲಿಯಾಸ್ ಕಿಟ್ಟಿ ಇವರುಗಳನ್ನು ದಿನಾಂಕ ೩-೩-೮೮ ರಂದು ದಸ್ತಗಿರಿ ಮಾಡಿ ೪-೩-೮೮ ರಂದು ನ್ಯಾಯಾಲಯದ ಮುಂದೆ ಹಾಜರು ಮಾಡಲಾಗಿ ಅವರುಗಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. ಮತ್ತೊಬ್ಬ ಅಪರಾಧಿ ಶ್ರೀ ಸಂತಿ ಶಿವಣ್ಣ, ಇವನ್ನು ೫-೩-೮೮ ರಲ್ಲಿ ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಇನ್ನೂ ೩ ಜನ ಆರೋಪಿಗಳು ತಲೆ ತಪ್ಪಿಸಿಕೊಂಡಿರುತ್ತಾರೆ. ಅವರುಗಳನ್ನು ಪತ್ತೆ ಹೆಚ್ಚಲು ಎಲ್ಲಾ ಪ್ರಯತ್ನಗಳು ಮಾತಲಾಗುತ್ತಿವೆ. ಮಾನ್ಯ ಅಧ್ಯಕ್ಷರೇ ಇವರು ನಂದಿನಿ ಲೇಔಟ್‌ಗೆ ಹೋಗುತ್ತಾರೆ ಎಂಬುದು ಪೋಲೀಸರಿಗೆ ಗೊತ್ತಿದ್ದರೆ ಅವರೂ ಜೊತೆಯಲ್ಲಿ ಹೋಗಿ ಪ್ರೊಟೆಕ್ಷನ್ ಕೊಡುತ್ತಿದ್ದರು. ಇದು ನಮಗೆ ಯಾರಿಗೂ ಗೊತ್ತಿರಲಿಲ್ಲ. ಇದು ಗೊತ್ತಾದ ತಕ್ಷಣ ನಾವು ಸೂಕ್ತ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಟಿ. ಎಸ್. ಮಣಿ.—ಶ್ರೀ ಕೃಷ್ಣನ್ ಅವರು ಎಂ.ಎಲ್.ಎ ಆಗಿದ್ದಾರೆ, ಇವರಿಗೆ ಸರಕಾರ ಏತಕ್ಕೆ ಪ್ರೊಟೆಕ್ಷನ್ ಕೊಡಲಿಲ್ಲ.